ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 19 ಎಲ್‌ಜಿಕ್ಯೂ 2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 11-3-2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ,
ಬೆಂಗಳೂರು.

179
4/S
9/3/20

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ~~ಪರಿಷತ್ತು~~ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ~~ಪರಿಷತ್ತಿನ~~ ಸಭೆಯ ಸದಸ್ಯರಾದ ಶ್ರೀ ಮುಕೇಶ್ ಬಿ.ಎಸ್., ರವರು ಮಂಡಿಸಿರುವ ಚುಕ್ಕೆ ~~ಗುರುತು~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 91 ಕ್ಕೆ ಉತ್ತರ ಒದಗಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ~~ಪರಿಷತ್ತಿನ~~ ಸಭೆಯ ಸದಸ್ಯರಾದ ಶ್ರೀ ಮುಕೇಶ್ ಬಿ.ಎಸ್., ಇವರು ಮಂಡಿಸಿರುವ ಚುಕ್ಕೆ ಗುರುತು/ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 91 ಕ್ಕೆ ಸಂಬಂಧಿಸಿದಂತೆ ಉತ್ತರದ 50 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಸಿ. ಬಲರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ ಭೂಮಂಜೂರಾತಿ-1

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 91
ಸದಸ್ಯರ ಹೆಸರು : ಶ್ರೀ ಸುರೇಶ್ ಡಿ.ಎಸ್ (ತರಿಕೆರೆ)
ಉತ್ತರಿಸುವ ದಿನಾಂಕ : 09-03-2020
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಸರ್ಕಾರದ ಕಾರ್ಯಕ್ರಮಗಳ ಅಭಿವೃದ್ಧಿಗಾಗಿ ಕಂದಾಯ ಭೂಮಿಗಳಾದ ತುರುಮಂದಿ ಜಾಗ, ಗುಂಡು ತೋಪು, ತಿಪ್ಪೆಗುಂಡಿ ಹಾಗೂ ಗೋಮಾಳ ಜಾಗವನ್ನು ನೀಡಲು ನಿಯಮಾವಳಿಗಳಲ್ಲಿ ಅವಕಾಶವಿದೆಯೇ;	ಹೌದು.
ಆ)	ಹಾಗಿದ್ದಲ್ಲಿ, ಯಾವ ನಿಯಮಗಳಡಿಯಲ್ಲಿ ಸರ್ಕಾರಿ ಯೋಜನೆಗಳಿಗೆ ಮಂಜೂರು ಮಾಡಬಹುದು? (ವಿವರ ನೀಡುವುದು)	ತುರುಮಂದಿ ಜಾಗ, ಗುಂಡುತೋಪು, ತಿಪ್ಪೆಗುಂಡಿಯಂತಹ ಬಿ-ಖರಾಬು ಜಮೀನುಗಳು ವಿಶೇಷ ಉದ್ದೇಶಗಳಿಗೆ ಮೀಸಲಾದ ಜಮೀನುಗಳಾಗಿರುತ್ತವೆ. ಇವುಗಳ ಮೇಲೆ ಸಾರ್ವಜನಿಕ ಹಕ್ಕುಗಳು ಇರುತ್ತವೆ. ಇವುಗಳು ಲಕ್ಷಣಗಳನ್ನು ಕಳೆದುಕೊಂಡಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 68(1) ರಡಿ ಪ್ರಕ್ರಿಯೆ ನಡೆಸಿ, ಸಾರ್ವಜನಿಕ ಹಕ್ಕನ್ನು ವಿಹಿತಗೊಳಿಸಿದ ನಂತರ ಸರ್ಕಾರಿ ಉದ್ದೇಶ ಮತ್ತು ಕಾರ್ಯಕ್ರಮಗಳಿಗೆ ಮೀಸಲಿರಿಸಲು / ಕಾಯ್ದಿರಿಸಲು ಅವಕಾಶವಿರುತ್ತದೆ. ಹಾಗೆಯೇ, ಗೋಮಾಳ ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 97(1)ರಡಿಯಲ್ಲಿ ಜಾನುವಾರುಗಳಿಗನುಗುಣವಾಗಿ ಮೀಸಲಿರಿಸಿದ ನಂತರ ಉಳಿಯುವ ಗೋಮಾಳ ಜಮೀನನ್ನು ನಿಯಮ 97(4)ರಡಿ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಸರ್ಕಾರದ ಉದ್ದೇಶಗಳಿಗೆ ಕಾಯ್ದಿರಿಸಬಹುದಾಗಿದೆ.

ಸಂಖ್ಯೆ: ಆರ್‌ಡಿ 19 ಎಲ್‌ಜಿಕ್ಯೂ 2020 (ಇ)

(ಆರ್. ಅಶೋಕ)
ಕಂದಾಯ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ವಇ 63 ಹೆಚ್‌ಎಎಂ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 07/03/2020

110
ಟಿ/ಎ
9/3/2020

ಇಂದ:

ಸರ್ಕಾರದ ಕಾರ್ಯದರ್ಶಿ,
ವಸತಿ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ~~ಪರಿಷತ್ತಿನ~~ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: **919**ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.919/2020, ದಿನಾಂಕ: 27/02/2020.

*****

ಮಾನ್ಯ ವಿಧಾನ ಸಭೆಯ ಸದಸ್ಯರಾದ **ಶ್ರೀ ರಘುಪತಿ ಭಟ್ ಕೆ. (ಉಡುಪಿ ವಿಧಾನಸಭಾ ಕ್ಷೇತ್ರ)** ಇವರ **ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 919ಕ್ಕೆ ಉತ್ತರದ 100 ಪ್ರತಿಗಳನ್ನು** ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಮಾಳಪ್ಪ ವೈ. ಕನ್ನೂರ)
ಶಾಖಾಧಿಕಾರಿ-2,
ವಸತಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನಸಭೆ ಸದಸ್ಯರ ಹೆಸರು:	ಶ್ರೀ ರಘುಪತಿ ಭಟ್ ಕೆ.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	919
ಉತ್ತರಿಸಬೇಕಾದ ದಿನಾಂಕ:	09.03.2020
ಉತ್ತರಿಸುವ ಸಚಿವರು	ವಿ.ಸೋಮಣ್ಣ ವಸತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಬಸವ ವಸತಿ ಯೋಜನೆಯಡಿ ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಎಷ್ಟು ಮನೆ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ; (ಜಿಲ್ಲಾವಾರು ಪ್ರಗತಿವಾರು ವಿವರ ನೀಡುವುದು)	ರಾಜ್ಯದ ಗ್ರಾಮ ಪಂಚಾಯತಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ಅಂದರೆ 2016-2017ನೇ ಸಾಲಿನಿಂದ 2018-19ನೇ ಸಾಲಿನವರೆವಿಗೆ ಬಸವ ವಸತಿ ಯೋಜನೆಯಡಿ ಒಟ್ಟು 1085144 ಮನೆಗಳನ್ನು ನಿರ್ಮಾಣ ಮಾಡಲು ಅನುಮೋದನೆ ನೀಡಿ ಕಾಮಗಾರಿ ಆದೇಶ ನೀಡಲಾಗಿದೆ. ಜಿಲ್ಲಾವಾರು ಪ್ರಗತಿವಾರು ವಿವರ ಅನುಬಂಧದಲ್ಲಿ ನೀಡಿದೆ.
ಆ)	ಭೌತಿಕ ಪ್ರಗತಿ ವರದಿಯನ್ನು ಸಾಧಿಸಿದ ಪ್ರತಿ ಮನೆಗೆ ಹಣ ಬಿಡುಗಡೆಯಾಗಿದೆಯೇ;	ಹೌದು. ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಯನ್ನಾಧಾರಿಸಿ ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.
ಇ)	ಭೌತಿಕ ಪ್ರಗತಿಯಾಗಿ ಎಲ್ಲಾ ಹಂತದಲ್ಲಿನ ಛಾಯಾಚಿತ್ರ ಆಧಾರಿತ ಜಿ.ಪಿ.ಎಸ್. ಆಗಿದ್ದರೂ ತಾಂತ್ರಿಕ ಸಮಸ್ಯೆ ಎಂಬ ಕಾರಣದಿಂದ ಅನುದಾನ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ. ವಸತಿ ಯೋಜನೆಗಳಡಿ ಫಲಾನುಭವಿಗಳು ನಿರ್ಮಿಸಿಕೊಂಡಿರುವ ಮನೆಗಳನ್ನು ನಿಗಮವು ಅಭಿವೃದ್ಧಿ ಪಡಿಸಿರುವ "ಇಂದಿರಾ ಮನೆ" ಆ್ಯಪ್ ಮೂಲಕ ಜಿ.ಪಿ.ಎಸ್ ಆಧಾರಿತ ಛಾಯಚಿತ್ರಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಫಲಾನುಭವಿಯಿಂದ ಪಡೆದು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ದೃಢೀಕರಣದ ಆಧಾರದ ಮೇಲೆ ಫಲಾನುಭವಿಗಳ ಆಧಾರ್ ಆಧಾರಿತ ಬ್ಯಾಂಕ್ ಖಾತೆಗೆ ಅನುದಾನವನ್ನು ನೇರವಾಗಿ ಬಿಡುಗಡೆಗೊಳಿಸಲಾಗುತ್ತಿದೆ.
ಈ)	ಹಾಗಿದ್ದಲ್ಲಿ, ಈ ಬಗ್ಗೆ ಹಲವಾರು ಗ್ರಾಮ ಪಂಚಾಯಿತಿಗಳಿಂದ ಅಹವಾಲನ್ನು ಸರ್ಕಾರಕ್ಕೆ ಕಳುಹಿಸುತ್ತಿದ್ದು ಕೈಗೊಂಡ ಕ್ರಮಗಳೇನು?	

		ಸರ್ಕಾರವು ಕಳೆದ ಆಗಸ್ಟ್ -2019ರಿಂದ ಅನುದಾನ ದುರ್ಬಳಕೆಯನ್ನು ತಡೆಹಿಡಿಯುವ ಉದ್ದೇಶದಿಂದ ದಿನಾಂಕ: 16.11.2019 ರ ಸರ್ಕಾರಿ ಆದೇಶದ ರೀತ್ಯಾ ಪ್ರಗತಿಯಲ್ಲಿರುವ ಹಾಗೂ ಅನುದಾನ ಬಿಡುಗಡೆಗೆ ಬೇಡಿಕೆ ಇರುವ ಮನೆಗಳನ್ನು Geo ಆಧಾರಿತ Vigil App ಮೂಲಕ ಪರಿಶೀಲಿಸಲು ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯವರ ಅಧ್ಯಕ್ಷತೆಯಲ್ಲಿ ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ರಚಿಸಲಾಗಿರುತ್ತದೆ. ಅದರಂತೆ ಸದರಿ ಸಮಿತಿಯು 2.23 ಲಕ್ಷ ಮನೆಗಳ ಪೈಕಿ 60401 ಮನೆಗಳನ್ನು Vigil App ಮೂಲಕ ಜಿ.ಪಿ.ಎಸ್ ಗೆ ಅಳವಡಿಸಲಾಗಿದ್ದು, ಅದರಲ್ಲಿ ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಯವರು ಅರ್ಹವೆಂದು ಶಿಫಾರಸ್ಸು ಮಾಡಿದ 35891 ಮನೆಗಳ ಪೈಕಿ "ವಿಜಿಲ್ ಆ್ಯಪ್" ಮೂಲಕ ಪರಿಶೀಲಿಸಿ ಅರ್ಹಗೊಂಡ ಒಟ್ಟಾರೆ 30508 ಮನೆಗಳ ಫಲಾನುಭವಿಗಳಿಗೆ ಇಲ್ಲಿಯವರೆಗೆ ಒಟ್ಟು ರೂ.140.26 ಕೋಟಿಗಳನ್ನು ಫಲಾನುಭವಿಗಳ ಖಾತೆಗೆ ಬಿಡುಗಡೆ ಮಾಡಲಾಗಿದೆ. 3243 ಮನೆಗಳು ಅನರ್ಹವಾಗಿರುವುದು ಕಂಡು ಬಂದಿರುತ್ತದೆ. ಇನ್ನುಳಿದ ಫಲಾನುಭವಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ತ್ವರಿತವಾಗಿ ಅನುದಾನ ಬಿಡುಗಡೆಗೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

(ವಿ.ಸೋಮಣ್ಣ)
ವಸತಿ ಸಚಿವರು

ವ ಇ 63 ಹೆಚ್‌ಎಎಂ 2020

5

LAQ-919 ಅನುಬಂಧ

2016-17ನೇ ಸಾಲಿನಿಂದ 2018-19ನೇ ಸಾಲಿನವರೆಗೆ ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆಗಳ ವಿವರ

District	Scheme	SeriesYearName	Approved	Complete	Foundation	Lintel	Roof	Unstarted	Block
Bagalkot	Basava Housing Sheme	2016-2017	5994	3189	426	450	544	1318	67
Bagalkot	Basava Housing Sheme	2017-2018	13240	4059	1612	1732	2275	3445	117
Bagalkot	Basava Housing Sheme	2018-2019	0	0	0	0	0	0	0
Bagalkot Total			**19234**	**7248**	**2038**	**2182**	**2819**	**4763**	**184**
Ballari	Basava Housing Sheme	2016-2017	6814	2579	881	674	797	1860	23
Ballari	Basava Housing Sheme	2017-2018	8823	1578	1894	1489	1527	2305	30
Ballari	Basava Housing Sheme	2018-2019	0	0	0	0	0	0	0
Ballari Total			**15637**	**4157**	**2775**	**2163**	**2324**	**4165**	**53**
Belagavi	Basava Housing Sheme	2016-2017	20701	13352	1375	1001	1931	2979	63
Belagavi	Basava Housing Sheme	2017-2018	32482	16755	2436	2500	5636	4885	270
Belagavi	Basava Housing Sheme	2018-2019	0	0	0	0	0	0	0
Belagavi Total			**53183**	**30107**	**3811**	**3501**	**7567**	**7864**	**333**
Bengaluru Rural	Basava Housing Sheme	2016-2017	3157	2026	253	66	54	685	73
Bengaluru Rural	Basava Housing Sheme	2017-2018	5791	3217	602	139	185	1475	173
Bengaluru Rural	Basava Housing Sheme	2018-2019	30	6	4	3	8	9	0
Bengaluru Rural Total			**8978**	**5249**	**859**	**208**	**247**	**2169**	**246**
Bengaluru Urban	Basava Housing Sheme	2016-2017	5000	2604	240	71	96	1846	143
Bengaluru Urban	Basava Housing Sheme	2017-2018	4327	2136	277	98	210	1570	36
Bengaluru Urban	Basava Housing Sheme	2018-2019	1	1	0	0	0	0	0
Bengaluru Urban Total			**9328**	**4741**	**517**	**169**	**306**	**3416**	**179**
Bidar	Basava Housing Sheme	2016-2017	6752	3665	831	701	1045	495	15
Bidar	Basava Housing Sheme	2017-2018	9362	2362	1910	1455	1615	1991	29
Bidar	Basava Housing Sheme	2018-2019	0	0	0	0	0	0	0
Bidar Total			**16114**	**6027**	**2741**	**2156**	**2660**	**2486**	**44**
Chamarajanagar	Basava Housing Sheme	2016-2017	5648	2875	608	304	611	1216	34
Chamarajanagar	Basava Housing Sheme	2017-2018	8035	2535	1716	800	1238	1695	51
Chamarajanagar	Basava Housing Sheme	2018-2019	0	0	0	0	0	0	0
Chamarajanagar Total			**13683**	**5410**	**2324**	**1104**	**1849**	**2911**	**85**
Chikkaballapur	Basava Housing Sheme	2016-2017	3658	2024	464	195	273	680	22
Chikkaballapur	Basava Housing Sheme	2017-2018	7439	2932	1417	503	817	1733	37
Chikkaballapur	Basava Housing Sheme	2018-2019	0	0	0	0	0	0	0
Chikkaballapur Total			**11097**	**4956**	**1881**	**698**	**1090**	**2413**	**59**
Chikkamagaluru	Basava Housing Sheme	2016-2017	4820	2844	384	199	292	1067	34
Chikkamagaluru	Basava Housing Sheme	2017-2018	6449	2545	1034	536	781	1527	26
Chikkamagaluru	Basava Housing Sheme	2018-2019	0	0	0	0	0	0	0
Chikkamagaluru Total			**11269**	**5389**	**1418**	**735**	**1073**	**2594**	**60**
Chitradurga	Basava Housing Sheme	2016-2017	6999	3672	654	357	422	1820	74
Chitradurga	Basava Housing Sheme	2017-2018	8895	2758	1709	687	1010	2662	69
Chitradurga	Basava Housing Sheme	2018-2019	1	1	0	0	0	0	0
Chitradurga Total			**15895**	**6431**	**2363**	**1044**	**1432**	**4482**	**143**
DakshinaKannada	Basava Housing Sheme	2016-2017	6283	4322	345	347	349	866	54
DakshinaKannada	Basava Housing Sheme	2017-2018	8209	4000	688	792	1023	1690	16
DakshinaKannada	Basava Housing Sheme	2018-2019	0	0	0	0	0	0	0
DakshinaKannada Total			**14492**	**8322**	**1033**	**1139**	**1372**	**2556**	**70**
Davanagere	Basava Housing Sheme	2016-2017	7893	3859	736	360	684	2005	249
Davanagere	Basava Housing Sheme	2017-2018	9908	2975	1588	831	1568	2870	76
Davanagere	Basava Housing Sheme	2018-2019	18	4	1	2	6	5	0
Davanagere Total			**17819**	**6838**	**2325**	**1193**	**2258**	**4880**	**325**
Dharwad	Basava Housing Sheme	2016-2017	5199	3043	503	268	678	631	76
Dharwad	Basava Housing Sheme	2017-2018	7867	2697	1275	778	1904	1103	110
Dharwad	Basava Housing Sheme	2018-2019	0	0	0	0	0	0	0
Dharwad Total			**13066**	**5740**	**1778**	**1046**	**2582**	**1734**	**186**
Gadag	Basava Housing Sheme	2016-2017	4636	2866	397	269	364	704	36
Gadag	Basava Housing Sheme	2017-2018	5632	1944	1044	668	733	1226	17
Gadag	Basava Housing Sheme	2018-2019	0	0	0	0	0	0	0

LAQ-919 ಅನುಬಂಧ

4

2016-17ನೇ ಸಾಲಿನಿಂದ 2018-19ನೇ ಸಾಲಿನವರೆಗೆ ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆಗಳ ವಿವರ

District	Scheme	SeriesYearName	Approved	Complete	Foundation	Lintel	Roof	Unstart	Block
Gadag Total			**10268**	**4810**	**1441**	**937**	**1097**	**1930**	**53**
Hassan	Basava Housing Sheme	2016-2017	10627	6244	1033	373	586	2315	76
Hassan	Basava Housing Sheme	2017-2018	15773	6333	2811	992	2087	3459	91
Hassan	Basava Housing Sheme	2018-2019	56	10	22	6	2	16	0
Hassan Total			**26456**	**12587**	**3866**	**1371**	**2675**	**5790**	**167**
Haveri	Basava Housing Sheme	2016-2017	9094	5197	975	562	777	1488	95
Haveri	Basava Housing Sheme	2017-2018	13235	4309	2108	1496	2041	3238	43
Haveri	Basava Housing Sheme	2018-2019	10	0	3	2	1	4	0
Haveri Total			**22339**	**9506**	**3086**	**2060**	**2819**	**4730**	**138**
Kalaburagi	Basava Housing Sheme	2016-2017	8527	4404	1163	849	1073	1008	30
Kalaburagi	Basava Housing Sheme	2017-2018	9692	2804	2232	1439	1402	1784	31
Kalaburagi	Basava Housing Sheme	2018-2019	0	0	0	0	0	0	0
Kalaburagi Total			**18219**	**7208**	**3395**	**2288**	**2475**	**2792**	**61**
Kodagu	Basava Housing Sheme	2016-2017	2702	1995	135	94	74	374	30
Kodagu	Basava Housing Sheme	2017-2018	2935	1410	502	237	248	535	3
Kodagu	Basava Housing Sheme	2018-2019	6	0	0	0	0	6	0
Kodagu Total			**5643**	**3405**	**637**	**331**	**322**	**915**	**33**
Kolar	Basava Housing Sheme	2016-2017	5198	3106	675	171	226	972	48
Kolar	Basava Housing Sheme	2017-2018	11970	4456	2592	656	1291	2898	77
Kolar	Basava Housing Sheme	2018-2019	0	0	0	0	0	0	0
Kolar Total			**17168**	**7562**	**3267**	**827**	**1517**	**3870**	**125**
Koppal	Basava Housing Sheme	2016-2017	7343	3596	908	888	1123	805	23
Koppal	Basava Housing Sheme	2017-2018	7956	2294	1659	1373	1617	969	44
Koppal	Basava Housing Sheme	2018-2019	0	0	0	0	0	0	0
Koppal Total			**15299**	**5890**	**2567**	**2261**	**2740**	**1774**	**67**
Mandya	Basava Housing Sheme	2016-2017	7711	5356	598	153	250	1310	44
Mandya	Basava Housing Sheme	2017-2018	20571	10305	2416	795	1731	5278	46
Mandya	Basava Housing Sheme	2018-2019	0	0	0	0	0	0	0
Mandya Total			**28282**	**15661**	**3014**	**948**	**1981**	**6588**	**90**
Mysuru	Basava Housing Sheme	2016-2017	12153	6551	1061	604	1378	2402	157
Mysuru	Basava Housing Sheme	2017-2018	20814	6849	2608	1492	3402	6358	105
Mysuru	Basava Housing Sheme	2018-2019	0	0	0	0	0	0	0
Mysuru Total			**32967**	**13400**	**3669**	**2096**	**4780**	**8760**	**262**
Raichur	Basava Housing Sheme	2016-2017	8344	4582	726	608	692	1641	95
Raichur	Basava Housing Sheme	2017-2018	4713	1537	755	655	628	1077	61
Raichur	Basava Housing Sheme	2018-2019	0	0	0	0	0	0	0
Raichur Total			**13057**	**6119**	**1481**	**1263**	**1320**	**2718**	**156**
Ramanagara	Basava Housing Sheme	2016-2017	4864	3018	384	102	185	1125	50
Ramanagara	Basava Housing Sheme	2017-2018	12869	6080	1318	489	1052	3874	56
Ramanagara	Basava Housing Sheme	2018-2019	327	100	46	40	85	54	2
Ramanagara Total			**18060**	**9198**	**1748**	**631**	**1322**	**5053**	**108**
Shivamogga	Basava Housing Sheme	2016-2017	7961	4355	769	624	816	1361	36
Shivamogga	Basava Housing Sheme	2017-2018	10517	3420	1574	1463	1856	2177	27
Shivamogga	Basava Housing Sheme	2018-2019	1	0	0	0	1	0	0
Shivamogga Total			**18479**	**7775**	**2343**	**2087**	**2673**	**3538**	**63**
Tumakuru	Basava Housing Sheme	2016-2017	9248	6100	709	292	430	1674	43
Tumakuru	Basava Housing Sheme	2017-2018	24380	11051	3847	1501	3050	4871	60
Tumakuru	Basava Housing Sheme	2018-2019	0	0	0	0	0	0	0
Tumakuru Total			**33628**	**17151**	**4556**	**1793**	**3480**	**6545**	**103**
Udupi	Basava Housing Sheme	2016-2017	3292	2188	202	201	223	447	31
Udupi	Basava Housing Sheme	2017-2018	6600	2869	683	666	877	1482	23
Udupi	Basava Housing Sheme	2018-2019	17	3	4	4	1	5	0
Udupi Total			**9909**	**5060**	**889**	**871**	**1101**	**1934**	**54**
UttaraKannada	Basava Housing Sheme	2016-2017	5776	3661	535	429	283	830	38
UttaraKannada	Basava Housing Sheme	2017-2018	11937	4308	2062	1411	1188	2906	62
UttaraKannada	Basava Housing Sheme	2018-2019	0	0	0	0	0	0	0
UttaraKannada Total			**17713**	**7969**	**2597**	**1840**	**1471**	**3736**	**100**
Vijayapura	Basava Housing Sheme	2016-2017	7662	4269	480	839	1008	1029	37
Vijayapura	Basava Housing Sheme	2017-2018	19700	7850	1941	3365	3370	3131	43
Vijayapura	Basava Housing Sheme	2018-2019	0	0	0	0	0	0	0

LAQ-919

ಅನುಬಂಧ

2016-17ನೇ ಸಾಲಿನಿಂದ 2018-19ನೇ ಸಾಲಿನವರೆಗೆ ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆಗಳ ವಿವರ

District	Scheme	SeriesYearName	Approved	Complete	Foundation	Lintel	Roof	Unstarted	Block
Vijayapura Total			**27362**	**12119**	**2421**	**4204**	**4378**	**4160**	**80**
Yadgiri	Basava Housing Sheme	2016-2017	4507	2765	386	404	416	502	34
Yadgiri	Basava Housing Sheme	2017-2018	3421	1369	586	434	371	558	103
Yadgiri	Basava Housing Sheme	2018-2019	0	0	0	0	0	0	0
Yadgiri Total			**7928**	**4134**	**972**	**838**	**787**	**1060**	**137**
Grand Total			**1085144**	**500338**	**135624**	**87968**	**129034**	**224652**	**7528**

ಬಸಪ್ಪ ಡಿ.
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆ.ಅ.)
ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ

ಕರ್ನಾಟಕ ಸರ್ಕಾರ

ಸಂಖ್ಯೆ: ವಇ 59 ಹೆಚ್‌ಎಎಂ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 07/03/2020

60
9/3/2020

ಇಂದ:

ಸರ್ಕಾರದ ಕಾರ್ಯದರ್ಶಿ,
ವಸತಿ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ~~ಪರಿಷತ್ತಿನ~~ ಸಭೆ **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 347ಕ್ಕೆ** ಉತ್ತರಿಸುವ ಬಗ್ಗೆ.
ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.347/2020. ದಿನಾಂಕ: 27/02/2020.

*****

ಮಾನ್ಯ ವಿಧಾನ ಸಭೆಯ ಸದಸ್ಯರಾದ **ಶ್ರೀ ಹಾಲಪ್ಪ ಹರತಾಳ್ ಹೆಚ್, (ಸಾಗರ ವಿಧಾನ ಸಭಾ ಕ್ಷೇತ್ರ),** ಇವರ **ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 347ಕ್ಕೆ ಉತ್ತರದ 100 ಪ್ರತಿಗಳನ್ನು** ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಸಹಿ)
(ಮಾಳಪ್ಪ ವೈ. ಕನ್ನೂರ)
ಶಾಖಾಧಿಕಾರಿ-2,
ವಸತಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನಸಭೆ ಸದಸ್ಯರ ಹೆಸರು:	ಶ್ರೀ ಹಾಲಪ್ಪ ಹರತಾಳ್ ಹೆಚ್.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	347
ಉತ್ತರಿಸ ಬೇಕಾದ ದಿನಾಂಕ:	09.03.2020
ಉತ್ತರಿಸುವ ಸಚಿವರು	ಶ್ರೀ ವಿ.ಸೋಮಣ್ಣ, ವಸತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜೀವ್ ಗಾಂಧಿ ವಸತಿ ನಿಗಮದಿಂದ ನಿರ್ಮಿಸಿದ ಮನೆಗಳಿಗೆ ಜಿ.ಪಿ.ಎಸ್ ಮಾಡಿದ್ದರೂ ಸಹಾ ಫಲಾನುಭವಿಗಳಿಗೆ ಬಿಲ್ ಪಾವತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಕಾರಣಗಳೇನು (ವಿವರ ಒದಗಿಸುವುದು).	ಹೌದು, ಬಂದಿದೆ. ವಿವಿಧ ವಸತಿ ಯೋಜನೆಗಳನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ರಾಜೀವ್ ಗಾಂಧಿ ವಸತಿ ನಿಗಮವು ಅನುಷ್ಠಾನಗೊಳಿಸುತ್ತಿದೆ. ವಸತಿ ಯೋಜನೆಗಳಡಿ ಫಲಾನುಭವಿಗಳು ನಿರ್ಮಿಸಿಕೊಂಡಿರುವ ಮನೆಗಳನ್ನು ನಿಗಮವು ಅಭಿವೃದ್ಧಿ ಪಡಿಸಿರುವ "ಇಂದಿರಾ ಮನೆ" ಆ್ಯಪ್ ಮೂಲಕ ಜಿ.ಪಿ.ಎಸ್ ಆಧಾರಿತ ಛಾಯಚಿತ್ರಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಫಲಾನುಭವಿಯಿಂದ ಪಡೆದು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ದೃಢೀಕರಣದ ಆಧಾರದ ಮೇಲೆ ಫಲಾನುಭವಿಗಳ ಆಧಾರ್ ಆಧಾರಿತ ಬ್ಯಾಂಕ್ ಖಾತೆಗೆ ಅನುದಾನವನ್ನು ನೇರವಾಗಿ ಬಿಡುಗಡೆಗೊಳಿಸಲಾಗುತ್ತಿದೆ. ಕಳೆದ ಆಗಸ್ಟ್ -2019 ರಿಂದ ಅನುದಾನ ದುರ್ಬಳಕೆಯನ್ನು ತಡೆಹಿಡಿಯುವ ಉದ್ದೇಶದಿಂದ ದಿನಾಂಕ:16.11.2019ರ ಸರ್ಕಾರದ ಆದೇಶದಲ್ಲಿ ಪ್ರಗತಿಯಲ್ಲಿರುವ ಹಾಗೂ ಅನುದಾನ ಬಿಡುಗಡೆಗೆ ಬೇಡಿಕೆ ಇರುವ ಮನೆಗಳನ್ನು Geo ಆಧಾರಿತ Vigil App ಮೂಲಕ ಪರಿಶೀಲಿಸಲು ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾಪಂಚಾಯತಿ
ಆ)	ಹಾಗಿದ್ದಲ್ಲಿ, ಸದರಿ ನಿಗಮದಿಂದ ನಿರ್ಮಿಸಲಾಗುತ್ತಿರುವ ಮನೆಗಳಿಗೆ ಬಿಲ್ ಪಾವತಿಸಲು ಕೈಗೊಂಡ ಕ್ರಮಗಳೇನು ?(ವಿವರ ಒದಗಿಸುವುದು).	

		ಮುಖ್ಯಕಾರ್ಯನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ರಚಿಸಲಾಗಿರುತ್ತದೆ. ಅದರಂತೆ ಸದರಿ ಸಮಿತಿಯು 2.23 ಲಕ್ಷ ಮನೆಗಳ ಪೈಕಿ 60401 ಮನೆಗಳನ್ನು Vigil App ಮೂಲಕ ಜಿ.ಪಿ.ಎಸ್ ಗೆ ಅಳವಡಿಸಲಾಗಿದ್ದು, ಅದರಲ್ಲಿ ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಯವರು ಅರ್ಹವೆಂದು ಶಿಫಾರಸ್ಸು ಮಾಡಿದ 35891 ಮನೆಗಳ ಪೈಕಿ "ವಿಜಿಲ್ ಆ್ಯಪ್" ಮೂಲಕ ಪರಿಶೀಲಿಸಿ ಅರ್ಹಗೊಂಡ ಒಟ್ಟಾರೆ 30508 ಮನೆಗಳ ಫಲಾನುಭವಿಗಳಿಗೆ ಇಲ್ಲಿಯವರೆಗೆ ಒಟ್ಟು ರೂ.140.26 ಕೋಟಿಗಳನ್ನು ಫಲಾನುಭವಿಗಳ ಖಾತೆಗೆ ಬಿಡುಗಡೆ ಮಾಡಲಾಗಿದೆ. 3243 ಮನೆಗಳು ಅನರ್ಹವಾಗಿರುವುದು ಕಂಡು ಬಂದಿರುತ್ತದೆ. ಇನ್ನುಳಿದ ಫಲಾನುಭವಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ತ್ವರಿತವಾಗಿ ಅನುದಾನ ಬಿಡುಗಡೆಗೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ವ ಇ 59 ಹೆಚ್‌ಎಂ 2020

(ವಿ.ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 16 ಆರ್‌ಇಹೆಚ್ 2020.

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 07.03.2020.

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

HS
4/5
9/3/20

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 737ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ರವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.737/2020, ದಿನಾಂಕ: 27.02.2020.

******

ಮಾನ್ಯ ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 737ಕ್ಕೆ ಸಂಬಂಧಿಸಿದಂತೆ ಉತ್ತರದ 100 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಕಂದಾಯ ಇಲಾಖೆ (ಪುನರ್ವಸತಿ)

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 737

ಪ್ರಶ್ನೆಗೆ ಉತ್ತರಿಸುವ ಸಚಿವರು : ಕಂದಾಯ ಸಚಿವರು

ಉತ್ತರಿಸಬೇಕಾದ ದಿನಾಂಕ : 09.03.2020.

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ ಯಾವಾಗ ಮತ್ತು ಯಾವ ಉದ್ದೇಶಕ್ಕೆ ಸ್ಥಾಪಿಸಲಾಯಿತು, 2019ರ ವರೆವಿಗೂ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದಿಂದ ನೀಡಿರುವ ಅನುದಾನವೆಷ್ಟು? (ವರ್ಷವಾರು ವಿವರ ನೀಡುವುದು)	ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಪರಂಪರೆಯ ತಾಣಗಳನ್ನು ಅಂತರಾಷ್ಟ್ರೀಯ ಯಾತ್ರಾ ಸ್ಥಳವನ್ನಾಗಿ, ಸಾಂಸ್ಕೃತಿಕ ಮತ್ತು ಪ್ರವಾಸ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲು ಮತ್ತು ಅದನ್ನು ನಿರ್ವಹಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 49 ಶಾಸನ 2011, ದಿನಾಂಕ: 24.01.2012ರಲ್ಲಿ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ, ಅಧಿನಿಯಮ, 2011 ರನ್ವಯ ಸ್ಥಾಪಿಸಲಾಗಿದೆ. ಪ್ರಾಧಿಕಾರ ಪ್ರಾರಂಭವಾದಾಗಿನಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ:-

ಆಯವ್ಯಯ ವರ್ಷ	ಬಿಡುಗಡೆಯಾದ ಅನುದಾನ
2007-2008	3,00,00,000
2008-2009	1,00,00,000
2009-2010	2,00,00,000
2010-2011	2,00,00,000
2011-2012	1,70,00,000
2012-2013	1,50,00,000
2013-2014	80,00,000
2014-2015	50,00,000
2015-2016	75,00,000
2016-2017	1,00,00,000
2017-2018	25,00,000
2018-2019	25,00,000
ಒಟ್ಟು	14,75,00,000

ಆ.	ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯನ್ನು ಎಷ್ಟುಬಾರಿ ನಡೆಸಲಾಗಿದೆ ?	ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯು ದಿನಾಂಕ: 14.06.2012 ಮತ್ತು 19.12.2018 ರಂದು ಅಂದರೆ ಎರಡು ಬಾರಿ ಜರುಗಿಸಲಾಗಿದೆ.
ಇ.	2018ನೇ ಸಾಲಿನಲ್ಲಿ ಸುವರ್ಣಸೌಧದಲ್ಲಿ ನಡೆದ ಸಭೆಯ ನಿರ್ಣಯಗಳೇನು?	ದಿನಾಂಕ: 19.12.2018 ರಂದು ಸುವರ್ಣಸೌಧದಲ್ಲಿ ನಡೆದ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ. 1. ಕಿತ್ತೂರು ಕೋಟೆಯ ಸುತ್ತಲಿನ ಕಂದಕ ಅಭಿವೃದ್ಧಿ ಹಾಗೂ ದೋಣಿ ವಿಹಾರ. 2. ಕಿತ್ತೂರು ರಾಣಿ ಚೆನ್ನಮ್ಮನ ವೃತ್ತದಿಂದ ಕೋಟೆ ಆವರಣದವರೆಗೆ ಎರಡು ಬದಿಗೆ ಎಲ್‌ಇಡಿ ದೀಪಗಳನ್ನು ಅಳವಡಿಸುವುದು. 3. ಕಿತ್ತೂರು ಪಟ್ಟಣದ ಗಾಡಾದ ಮರಡಿ ಸ್ಥಳದಲ್ಲಿ 8 ಎಕರೆ ಜಮೀನಿನಲ್ಲಿ ರಾಣಿ ಚೆನ್ನಮ್ಮನ ಇತಿಹಾಸ ಬಿಂಬಿಸುವ ರಾಕ್ ಗಾರ್ಡನ್ ನಿರ್ಮಾಣ ಹಾಗೂ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ಪಾರಂಪರಿಕ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ನಿರ್ಣಯಿಸಲಾಗಿದೆ.
ಈ.	2018ನೇ ಸಾಲಿನ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯ ನಿರ್ಣಯದಂತೆ ಮಾನ್ಯ ಮುಖ್ಯಮಂತ್ರಿಗಳಿಂದ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ರೂ.200.00 ಕೋಟಿ ಅನುದಾನ ನೀಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ?	ಪ್ರಸ್ತುತ ಆರ್ಥಿಕ ಸಂಕಷ್ಟಗಳ ಹಿನ್ನೆಲೆಯಲ್ಲಿ, ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಪಾರಂಪರಿಕ ಸ್ಥಳಗಳ ಅಭಿವೃದ್ಧಿಗಾಗಿ ರೂ.200.00 ಕೋಟಿಗಳ ಕ್ರಿಯಾ ಯೋಜನೆಗೆ ಸಮ್ಮತಿಸುವುದು ಕಷ್ಟಸಾಧ್ಯ. ಆದುದರಿಂದ, ಸದರಿ ಕ್ರಿಯಾ ಯೋಜನೆಯನ್ನು ಸದ್ಯಕ್ಕೆ ಕೈಬಿಡಲಾಗಿದೆ.
ಉ.	ಸದರಿ ಅನುದಾನ ಬಿಡುಗಡೆಗೆ ಸರ್ಕಾರ ಕೈಗೊಂಡಿರುವ ಕ್ರಮವೇನು) ವಿವರ ನೀಡುವುದು?	

ಸಂಖ್ಯೆ: ಕಂಇ 16 ಆರ್‌ಇಹೆಚ್ 2020.

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ/36/ಎಂಎನ್‌ಎಸ್‌ಎ/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 07–03–2020

43
9/3/20

ಇವರಿಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ),
ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ದೇವೇಗೌಡ ಜಿ.ಟಿ. (ಚಾಮುಂಡೇಶ್ವರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 765ಕ್ಕೆ ಉತ್ತರ ಒದಗಿಸುವ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ದೇವೇಗೌಡ ಜಿ.ಟಿ. (ಚಾಮುಂಡೇಶ್ವರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 765ಕ್ಕೆ ಸಂಬಂಧಿಸಿದ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

(ಕೆ.ಏಕೇಶ್ ಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ.

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸಮನ್ವಯ) – ಉತ್ತರದ ಐದು ಪ್ರತಿಗಳನ್ನು ಲಗತ್ತಿಸಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	765
ಉತ್ತರಿಸುವ ದಿನಾಂಕ	09-03-2020
ಮಾನ್ಯ ಸದಸ್ಯರ ಹೆಸರು	ಶ್ರೀ ದೇವೇಗೌಡ ಜಿ.ಟಿ. (ಚಾಮುಂಡೇಶ್ವರಿ)
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದ ಉಪನೋಂದಣಾಧಿಕಾರಿ ಕಛೇರಿಗಳಲ್ಲಿ ನೋಂದಣಿ ಕಾರ್ಯವು ಮಂದಗತಿಯಲ್ಲಿ ನಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ	ಹಾಗಿದ್ದಲ್ಲಿ, ನೋಂದಣಿ ಕಾರ್ಯವನ್ನು ಚುರುಕುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	1) ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಎಲ್ಲಾ ಉಪನೋಂದಣಿ ಕಛೇರಿಗಳನ್ನು ಇ-ಆಡಳಿತ ಇಲಾಖೆ ಒದಗಿಸಿರುವ ಕೆ-ಸ್ವಾನ್ ಅಂತರ್‌ಜಾಲ ವ್ಯವಸ್ಥೆಯ ಮುಖಾಂತರ ಜೋಡಣೆಗೊಳಿಸಲಾಗಿದೆ. ಕೆ-ಸ್ವಾನ್ ಅಂತರ್‌ಜಾಲ ವ್ಯವಸ್ಥೆಯ ಸೇವೆಯು ತೃಪ್ತಿಕರವಾಗಿದ್ದು, ಕಾವೇರಿ ತಂತ್ರಾಂಶದಿಂದ ಸಾರ್ವಜನಿಕರಿಗೆ ಸೇವಾ ಪೂರೈಕೆ ಕಾರ್ಯವು ಸುಗಮವಾಗಿ ನಡೆಯುತ್ತಿದೆ. 2) ಇಲಾಖೆಯ ನೋಂದಣಿ ಪ್ರಕ್ರಿಯೆಯನ್ನು ಸುಗಮಗೊಳಿಸಲು ಹಾಗೂ ರಾಜ್ಯದಲ್ಲಿ ವ್ಯವಹಾರ ಸರಳೀಕರಣಗೊಳಿಸುವ (EODB) ನಿಟ್ಟಿನಲ್ಲಿ ದಸ್ತಾವೇಜು ನೋಂದಾಯಿಸುವಾಗ ಸರಿಯಾದ ಪಕ್ಷಕಾರರನ್ನು ಗುರುತಿಸಲು ಹಾಗೂ ಮೋಸದ ನೋಂದಣಿ ಮತ್ತು impersonation ಆಗುವುದನ್ನು ತಡೆಯಲು ಮೊಬೈಲ್ ನಂಬರ್ ಮೂಲಕ ಓ.ಟಿ.ಪಿ (One Time Password) ಪಡೆದು ಅದನ್ನು ಪ್ರಮಾಣೀಕರಿಸುವ ಉದ್ದೇಶಕ್ಕಾಗಿ ಓ.ಟಿ.ಪಿ ವ್ಯವಸ್ಥೆ ಜಾರಿಗೊಳಿಸಲಾಗಿದೆ. 3) ಇಲಾಖೆಯ ನೋಂದಣಿ ಪ್ರಕ್ರಿಯೆಯನ್ನು ಸುಗಮಗೊಳಿಸಲು ವರ್ಷಾಂತ್ಯದ ನೋಂದಣಿ ಒತ್ತಡವನ್ನು ಕಡಿಮೆ ಮಾಡಲು ಕಛೇರಿ ಕೆಲಸದ ಅವಧಿಯನ್ನು ಬೆಳಿಗ್ಗೆ 09.00 ರಿಂದ ಸಂಜೆ 06.30 ರವರೆಗೆ ದಿನಾಂಕ: 31-03-2020ರವರೆಗೆ ವಿಸ್ತರಿಸಲಾಗಿದೆ.

ಸಂಖ್ಯೆ: ಕಂಇ/36/ಎಂಎನ್‌ಎಸ್‌ಎ/2020

(ಆರ್.ಅಶೋಕ್)
ಕಂದಾಯ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ವಇ 69 ಹೆಚ್‌ಎಎಂ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 07/03/2020

143
U/S
9/3/2020

ಇಂದ:

ಸರ್ಕಾರದ ಕಾರ್ಯದರ್ಶಿ,
ವಸತಿ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ~~ಪರಿಷತ್ತಿನ~~ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 514ಕ್ಕೆ ಉತ್ತರಿಸುವ ಬಗ್ಗೆ.
ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.514/2020, ದಿನಾಂಕ: 27/02/2020.

*****

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ, (ಬಂಗಾರಪೇಟೆ ವಿಧಾನಸಭಾ ಕ್ಷೇತ್ರ), ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 514ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಮಾಳಪ್ಪ ವೈ. ಕನ್ನೂರ)
ಶಾಖಾಧಿಕಾರಿ–2,
ವಸತಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನಸಭೆ ಸದಸ್ಯರ ಹೆಸರು:	ಶ್ರೀ ಎಸ್. ಎನ್. ನಾರಾಯಣಸ್ವಾಮಿ ಕೆ. ಎಂ.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	514
ಉತ್ತರಿಸ ಬೇಕಾದ ದಿನಾಂಕ:	09.03.2020
ಉತ್ತರಿಸುವ ಸಚಿವರು	ಶ್ರೀ ವಿ.ಸೋಮಣ್ಣ, ವಸತಿ ಸಚಿವರು

<table>
<tr><th>ಕ್ರ.ಸ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2018-19 ಮತ್ತು 2019-20ನೇ ಸಾಲಿನಲ್ಲಿ ಬಂಗಾರಪೇಟೆ ವಿಧಾನಸಭಾ ಕ್ಷೇತ್ರಕ್ಕೆ ವಿವಿಧ ಯೋಜನೆಗಳಡಿಯಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)</td><td>2018-19 ಮತ್ತು 2019-20ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳಡಿ ಬಂಗಾರಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಒಟ್ಟು 995 ಮನೆಗಳು ಮಂಜೂರು ಮಾಡಿ ಗುರಿಯನ್ನು ನಿಗದಿಪಡಿಸಲಾಗಿದ್ದು, ಸದರಿ ಗುರಿಗೆ ಎದುರಾಗಿ 12 ಫಲಾನುಭವಿಗಳನ್ನು ಆಯ್ಕೆಗೊಳಿಸಿ ಕಾಮಗಾರಿ ಆದೇಶ ನೀಡಲಾಗಿದೆ. ವಿವರ ಈ ಕೆಳಗಿನಂತಿವೆ.
<table>
<tr><th>ಕ್ರ. ಸಂ.</th><th>ಯೋಜನೆ</th><th>ವರ್ಷ</th><th>ಗುರಿ</th><th>ಆಯ್ಕೆ</th></tr>
<tr><td>1</td><td>ಬಸವ ವಸತಿ</td><td>2018-19</td><td>560</td><td>0</td></tr>
<tr><td>2</td><td>ಬಸವ ವಸತಿ ಹೆಚ್ಚುವರಿ</td><td>2018-19</td><td>300</td><td>0</td></tr>
<tr><td>3</td><td>ವಾಜಪೇಯಿ ನಗರ ವಸತಿ ಯೋಜನೆ</td><td>2018-19</td><td>37</td><td>0</td></tr>
<tr><td>4</td><td>ಪ್ರಧಾನ ಮಂತ್ರಿ ಆವಾಸ್ (ಗ್ರಾ)</td><td>2019-20</td><td>98</td><td>12</td></tr>
<tr><td colspan="3">ಒಟ್ಟು</td><td>995</td><td>12</td></tr>
</table></td></tr>
<tr><td>ಆ)</td><td>ಈ ಪೈಕಿ ನಿರ್ಮಾಣವಾದ ಮನೆಗಳ ಸಂಖ್ಯೆ ಮತ್ತು ವೆಚ್ಚ ಮಾಡಲಾದ ಅನುದಾನದ ಮೊತ್ತವೆಷ್ಟು ; (ವಿವರ ನೀಡುವುದು)</td><td>ಈ ಹಿಂದಿನ ವರ್ಷಗಳಲ್ಲಿ ಮಂಜೂರು ಮಾಡಿ ಪ್ರಗತಿಯಲ್ಲಿದ್ದ ಮನೆಗಳು ಸೇರಿದಂತೆ ಒಟ್ಟಾರೆ 2018-2019 ಮತ್ತು 2019-20ನೇ ಆರ್ಥಿಕ ವರ್ಷಗಳಲ್ಲಿ ಒಟ್ಟು 2888 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಹಾಗೂ ಇದಕ್ಕಾಗಿ ರೂ. 28.19 ಕೋಟಿಗಳನ್ನು ಖರ್ಚು ಮಾಡಲಾಗಿದೆ.</td></tr>
<tr><td>ಇ)</td><td>ಮನೆ ನಿರ್ಮಾಣ ಪೂರ್ಣಗೊಂಡಿದ್ದರೂ ಹಣ ಬಿಡುಗಡೆಯಾಗದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ;</td><td rowspan="2">ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಅನುದಾನ ಬಿಡುಗಡೆಗೆ ಬೇಡಿಕೆ ಇರುವ ಫಲಾನುಭವಿಗಳ ಸಂಖ್ಯೆ ಒಟ್ಟು 1243.

ಈ ಸಂಬಂಧ ಒಟ್ಟಾರೆಯಾಗಿ ರೂ.4.82 ಕೋಟಿಗಳ ಅನುದಾನ ಬಿಡುಗಡೆ ಮಾಡಲು ಬಾಕಿ ಇರುತ್ತದೆ.</td></tr>
<tr><td>ಈ)</td><td>ಈ ಸಂಬಂಧ ಪಾವತಿಸಬೇಕಾದ ಹಣದ ಮೊತ್ತವೆಷ್ಟು ; ಯಾವ ಕಾರಣದಿಂದಾಗಿ</td></tr>
</table>

	ಇವರಿಗೆ ಹಣ ಪಾವತಿಯಾಗಿರುವುದಿಲ್ಲ ? (ವಿವರ ನೀಡುವುದು)	ವಸತಿ ಯೋಜನೆಗಳಡಿ ಫಲಾನುಭವಿಗಳು ನಿರ್ಮಿಸಿಕೊಂಡಿರುವ ಮನೆಗಳನ್ನು ನಿಗಮವು ಅಭಿವೃದ್ಧಿ ಪಡಿಸಿರುವ "ಇಂದಿರಾ ಮನೆ" ಆ್ಯಪ್ ಮೂಲಕ ಜಿ.ಪಿ.ಎಸ್ ಆಧಾರಿತ ಛಾಯಚಿತ್ರಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಫಲಾನುಭವಿಯಿಂದ ಪಡೆದು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ದೃಢೀಕರಣದ ಆಧಾರದ ಮೇಲೆ ಫಲಾನುಭವಿಗಳ ಆಧಾರ್ ಆಧಾರಿತ ಬ್ಯಾಂಕ್ ಖಾತೆಗೆ ಅನುದಾನವನ್ನು ನೇರವಾಗಿ ಬಿಡುಗಡೆಗೊಳಿಸಲಾಗುತ್ತಿದೆ. ಸರ್ಕಾರದ ಅನುದಾನ ದುರ್ಬಳಕೆಯನ್ನು ತಡೆಯುವ ಉದ್ದೇಶದಿಂದ ದಿನಾಂಕ: 16.11.2019 ರ ಸರ್ಕಾರಿ ಆದೇಶದ ರೀತ್ಯಾ ಪ್ರಗತಿಯಲ್ಲಿರುವ ಹಾಗೂ ಅನುದಾನ ಬಿಡುಗಡೆಗೆ ಬೇಡಿಕೆ ಇರುವ ಮನೆಗಳನ್ನು Geo ಆಧಾರಿತ Vigil App ಮೂಲಕ ಪರಿಶೀಲಿಸಲು ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾಪಂಚಾಯತಿ ಮುಖ್ಯಕಾರ್ಯನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ರಚಿಸಲಾಗಿರುತ್ತದೆ. ಅದರಂತೆ ಸದರಿ ಸಮಿತಿಯು ಬಂಗಾರಪೇಟೆ ವಿಧಾನಸಭಾ ಕ್ಷೇತ್ರ/ತಾಲ್ಲೂಕಿನಲ್ಲಿ Vigil App ಮೂಲಕ ಜಿ.ಪಿ.ಎಸ್ ಗೆ ಅಳವಡಿಸಿ ಪರಿಶೀಲಿಸಿ ಅರ್ಹಗೊಂಡ ಒಟ್ಟು 480 ಮನೆಗಳ ಫಲಾನುಭವಿಗಳಿಗೆ ಇಲ್ಲಿಯವರೆಗೆ ಒಟ್ಟು ರೂ.2.18 ಕೋಟಿಗಳನ್ನು ಫಲಾನುಭವಿಗಳ ಖಾತೆಗೆ ಬಿಡುಗಡೆ ಮಾಡಲಾಗಿದೆ. ಇನ್ನುಳಿದ ಫಲಾನುಭವಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ತ್ವರಿತವಾಗಿ ಅನುದಾನ ಬಿಡುಗಡೆಗೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ವ.ಇ 69 ಹೆಚ್‌ಎಂ 2020

(ವಿ.ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ವಇ 60 ಹೆಚ್‌ಎಎಂ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 07/03/2020

75
9/3/2021

ಇಂದ:

ಸರ್ಕಾರದ ಕಾರ್ಯದರ್ಶಿ,
ವಸತಿ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ~~ಪರಿಷತ್ತಿನ~~ ಸಭೆಯ **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1013ಕ್ಕೆ** ಉತ್ತರಿಸುವ ಬಗ್ಗೆ.
ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.1013/2020, ದಿನಾಂಕ: 27/02/2020.

*****

ಮಾನ್ಯ ವಿಧಾನ ಸಭೆಯ ಸದಸ್ಯರಾದ **ಶ್ರೀ ಖಾದರ್ ಯು.ಟಿ. (ಮಂಗಳೂರು ವಿಧಾನ ಸಭಾ ಕ್ಷೇತ್ರ)** ಇವರ **ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 1013ಕ್ಕೆ ಉತ್ತರದ 100 ಪ್ರತಿಗಳನ್ನು** ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಮಾಳಪ್ಪ ವೈ. ಕನ್ನೂರ)
ಶಾಖಾಧಿಕಾರಿ-2,
ವಸತಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನಸಭೆ ಸದಸ್ಯರ ಹೆಸರು:	ಶ್ರೀ ಖಾದರ್ ಯು.ಟಿ.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	1013
ಉತ್ತರಿಸ ಬೇಕಾದ ದಿನಾಂಕ:	09.03.2020
ಉತ್ತರಿಸುವ ಸಚಿವರು	ಶ್ರೀ ವಿ.ಸೋಮಣ್ಣ, ವಸತಿ ಸಚಿವರು

ಕ್ರ.ಸ	ಪ್ರಶ್ನೆ	ಉತ್ತರ
ಅ)	ಬಸವ ವಸತಿ ಯೋಜನೆಯಲ್ಲಿ ಮಂಜೂರಾತಿ ಪಡೆದು ಮನೆ ನಿರ್ಮಿಸುತ್ತಿರುವ ಬಡ ಕುಟುಂಬಗಳಿಗೆ ಅನುದಾನ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ದಕ್ಷಿಣ ಕನ್ನಡ ಜಿಲ್ಲೆಗೆ ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆಗಳಲ್ಲಿ ಒಟ್ಟು 34323 ಮನೆಗಳು ವಿವಿಧ ಹಂತಗಳಲ್ಲಿದ್ದು, ವಿವರ ಇಂತಿದೆ. ತಳಪಾಯ: 1678; ಕಿಟಕಿ: 1710; ಛಾವಣಿ: 1909; ಪೂರ್ಣ: 29026; ಒಟ್ಟು: 34323
ಆ)	ಬಂದಿದ್ದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ಹಂತಗಳಲ್ಲಿರುವ ಮನೆಗಳ ಸಂಖ್ಯೆ ಎಷ್ಟು; ಇಲ್ಲಿನ ಫಲಾನುಭವಿಗಳಿಗೆ ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು (ವಿವರ ನೀಡುವುದು)?	ಸರ್ಕಾರವು ಕಳೆದ ಆಗಸ್ಟ್ -2019ರಿಂದ ಅನುದಾನ ದುರ್ಬಳಕೆಯನ್ನು ತಡೆಹಿಡಿಯುವ ಉದ್ದೇಶದಿಂದ ದಿನಾಂಕ: 16.11.2019 ರ ಸರ್ಕಾರಿ ಆದೇಶದಂತೆ ಪ್ರಗತಿಯಲ್ಲಿರುವ ಹಾಗೂ ಅನುದಾನ ಬಿಡುಗಡೆಗೆ ಬೇಡಿಕೆ ಇರುವ ಮನೆಗಳನ್ನು Geo ಆಧಾರಿತ Vigil App ಮೂಲಕ ಪರಿಶೀಲಿಸಲು ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ರಚಿಸಲಾಗಿರುತ್ತದೆ. ಅದರಂತೆ ಸದರಿ ಸಮಿತಿಯು 2.23 ಲಕ್ಷ ಮನೆಗಳ ಪೈಕಿ 60401 ಮನೆಗಳನ್ನು Vigil App ಮೂಲಕ ಜಿ.ಪಿ.ಎಸ್ ಗೆ ಅಳವಡಿಸಲಾಗಿದ್ದು, ಅದರಲ್ಲಿ ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಯವರು ಅರ್ಹವೆಂದು ಶಿಫಾರಸ್ಸು ಮಾಡಿದ 35891 ಮನೆಗಳ ಪೈಕಿ "ವಿಜಿಲ್

		ಆ್ಯಪ್ ಮೂಲಕ ಪರಿಶೀಲಿಸಿ ಅರ್ಹಗೊಂಡ ಒಟ್ಟಾರೆ 30508 ಮನೆಗಳ ಫಲಾನುಭವಿಗಳಿಗೆ ಇಲ್ಲಿಯವರೆಗೆ ಒಟ್ಟು ರೂ.140.26 ಕೋಟಿಗಳನ್ನು ಫಲಾನುಭವಿಗಳ ಖಾತೆಗೆ ಬಿಡುಗಡೆ ಮಾಡಲಾಗಿದೆ. 3243 ಮನೆಗಳು ಅನರ್ಹವಾಗಿರುವುದು ಕಂಡು ಬಂದಿರುತ್ತದೆ. ಇನ್ನುಳಿದ ಫಲಾನುಭವಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ತ್ವರಿತವಾಗಿ ಅನುದಾನ ಬಿಡುಗಡೆಗೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ವಇ 60 ಹೆಚ್ಎಎಂ 2020

(ವಿ.ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 132 ಎಸ್ ಡಿ ಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ: 06/03/2020

187
U/S
09/03/2020

ಇದರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು,

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ
ವಿಧಾನಸೌಧ

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ವೇದವ್ಯಾಸ ಕಾಮತ್ ಡಿ. ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ:1009 ಗೆ ಉತ್ತರಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ವೇದವ್ಯಾಸ ಕಾಮತ್ ಡಿ. ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ:1009 ಗೆ ಸಂಬಂಧಿಸಿದಂತೆ ತಯಾರಿಸಿದ ಉತ್ತರದ 50 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ವಿ.ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಮಾಜ ಕಲ್ಯಾಣ ಇಲಾಖೆ,

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಸಂಖ್ಯೆ	:	1009
ಸದಸ್ಯರ ಹೆಸರು	:	ಶ್ರೀ ವೇದವ್ಯಾಸ ಕಾಮತ್ ಡಿ.
ಉತ್ತರಿಸುವ ದಿನಾಂಕ	:	09.03.2020
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು

ಕ್ರ. ಸಂ	ವಿಷಯ	ಉತ್ತರ
ಅ)	ಡಾ: ಬಿ.ಆರ್.ಅಂಬೇಡ್ಕರ್ ನಿಗಮದಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನಗರ ಪ್ರದೇಶದ ಕಿರುಸಾಲ ಮತ್ತು ಗಂಗಾ ಕಲ್ಯಾಣ ಯೋಜನೆಗಳಿಗೆ ಯಾವುದೇ ಅರ್ಜಿಗಳ ಸ್ವೀಕೃತವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಡಿ ನಗರ ಪ್ರದೇಶದ ಪರಿಶಿಷ್ಟ ಜಾತಿಯವರಿಂದ ಒಟ್ಟು 32 ಅರ್ಜಿಗಳು ಕಿರುಸಾಲ ಮತ್ತು ಗಂಗಾ ಕಲ್ಯಾಣ ಯೋಜನೆಗಳಡಿ ಸ್ವೀಕೃತವಾಗಿರುತ್ತದೆ. ಪರಿಶಿಷ್ಟ ಪಂಗಡದವರಿಂದ ಯಾವುದೇ ಅರ್ಜಿ ಸ್ವೀಕೃತವಾಗಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗೆ ಸ್ವೀಕೃತವಾದ ಅರ್ಜಿಗಳೆಷ್ಟು (ವಿವರ ನೀಡುವುದು);	ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ)	ಈ ಯೋಜನೆಯಡಿ ನಿಗದಿಪಡಿಸಿ ಗುರಿಯನ್ನು ಇದೇ ನಿಗಮದ ಯಾವುದಾದರೂ ಒಂದು ಯೋಜನೆಯ ಬೇರೆ ಫಲಾನುಭವಿಗಳಿಗೆ ಬಳಸಿಕೊಳ್ಳಲು ಸರ್ಕಾರ ಕ್ರಮ ಕೈಗೊಂಡಿದೆಯೇ (ವಿವರ ನೀಡುವುದು)?	ನಿಗಮವು ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಹಾಗೂ ಮೈಕ್ರೋ ಕ್ರೆಡಿಟ್ ಕಿರುಸಾಲ ಯೋಜನೆಗಳಿಗೆ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನವನ್ನು ಬೇರೆ ಯೋಜನೆಗೆ ವರ್ಗಾಯಿಸದೇ ಆಯಾ ಯೋಜನೆಗೆ ವಿನಿಯೋಗಿಸಬೇಕಾಗಿರುತ್ತದೆ. ಆದುದರಿಂದ, ಬೇರೆ ಯೋಜನೆಯ ಫಲಾನುಭವಿಗಳಿಗೆ ಬಳಸಿಕೊಳ್ಳಲು ಅವಕಾಶವಿರುವುದಿಲ್ಲ.

ಸಕಇ 132 ಎಸ್‌ಡಿಸಿ 2020

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ ಸಚಿವರು

ಡಾ:ಬಿ.ಆರ್ ಅಂಬೇಡ್ಕರ್ ಅ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ.ವೇದವ್ಯಾಸ

ಕಳೆದ 03 ವರ್ಷಗಳಲ್ಲಿ ಕಿರುಸಾಲ ಮತ್ತು ಗಂ

ಕ್ರಸಂ	ವಿಧಾನ ಸಭಾ ಕ್ಷೇತ್ರ	ಮೈಕ್ರೋ-	
		2017-18	2
		ಸ್ವೀಕರಿಸಿದ ಅರ್ಜಿಗಳ ಸಂಖ್ಯೆ	ಅಜ
1	ಮಂಗಳೂರು	0	
2	ಮಂಗಳೂರು ಉತ್ತರ	0	
3	ಮಂಗಳೂರು ದಕ್ಷಿಣ	0	
4	ಮೂಡಬಿದ್ರೆ	0	
5	ಬಂಟ್ವಾಳ	0	
6	ಬೆಳ್ತಂಗಡಿ	0	
7	ಪುತ್ತೂರು	0	
8	ಸುಳ್ಯ	0	
	ಒಟ್ಟು	0	

ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 133 ಎಸ್ ಡಿ ಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ: 06/03/2020

16
u/s
09/03/2020

ಇದರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ
ವಿಧಾನಸೌಧ

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ. ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ:875 ಗೆ ಉತ್ತರಿಸುವ ಬಗ್ಗೆ.

ಮೇಲ್ಕಂಢ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ:875 ಗೆ ಸಂಬಂಧಿಸಿದಂತೆ ತಯಾರಿಸಿದ ಉತ್ತರದ 50 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ವಿ.ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಮಾಜ ಕಲ್ಯಾಣ ಇಲಾಖೆ,

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಸಂಖ್ಯೆ : 875
ಸದಸ್ಯರ ಹೆಸರು : ಶ್ರೀ ಅಶೋಕ್ ನಾಯಕ್ ಕೆ.ಬಿ.
ಉತ್ತರಿಸುವ ದಿನಾಂಕ : 09.03.2020
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು

ಕ್ರ. ಸಂ	ವಿಷಯ	ಉತ್ತರ
ಅ)	ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಯೋಜನೆಗಳಾದ ಗಂಗಾ ಕಲ್ಯಾಣ, ಉದ್ಯಮಶೀಲತೆ, ಕಿರುಸಾಲ ಯೋಜನೆಗಳಡಿ ಗುರಿಯನ್ನು ಪ್ರತಿ ವರ್ಷ ಯಾವ ಮಾನದಂಡದ ಮೇಲೆ ನಿಗದಿಪಡಿಸಲಾಗುತ್ತಿದೆ;	ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಪರಿಶಿಷ್ಟ ಜಾತಿಯ ಜನರ ಆರ್ಥಿಕ ಸಬಲೀಕರಣಕ್ಕಾಗಿ ಗಂಗಾ ಕಲ್ಯಾಣ ಯೋಜನೆ, ಉದ್ಯಮಶೀಲತೆ ಯೋಜನೆ, ಕಿರುಸಾಲ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗಳಿಗೆ ಆಯಾ ಆರ್ಥಿಕ ವರ್ಷದ ಆಯವ್ಯಯದಲ್ಲಿ ಒದಗಿಸುವ ಅನುದಾನವನ್ನು ವಿಧಾನಸಭಾ ಕ್ಷೇತ್ರವಾರು ಪರಿಶಿಷ್ಟ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ ಹಂಚಿಕೆ ಮಾಡಿ ಆರ್ಥಿಕ ಮತ್ತು ಭೌತಿಕ ಗುರಿಯನ್ನು ನಿಗದಿಪಡಿಸಲಾಗುತ್ತಿದೆ.
ಆ)	ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರವ್ಯಾಪ್ತಿಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಗುರಿಯನ್ನು ನಿಗದಿಪಡಿಸದೇ ಅವೈಜ್ಞಾನಿಕವಾಗಿ ಗುರಿಯನ್ನು ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಶಿವಮೊಗ್ಗ ಗ್ರಾಮಾಂತರ, ಸೊರಬ. ಸಾಗರ, ಹೊಸನಗರ, ತೀರ್ಥಹಳ್ಳಿ, ಶಿವಮೊಗ್ಗ ಮತ್ತು ಭೈಂದೂರು ವಿಧಾನಸಭಾ ಕ್ಷೇತ್ರಗಳಲ್ಲಿ ಬಂಜಾರ, ಭೋವಿ, ಆದಿಜಾಂಬವ, ಆದಿಕರ್ನಾಟಕ, ಚಲವಾದಿ ಮತ್ತು ವಾಲ್ಮೀಕಿ ಜನಾಂಗದವರು ಅತೀ ಹೆಚ್ಚಿನ ಜನಸಂಖ್ಯೆಯಲ್ಲಿ ವಾಸ ಮಾಡುತ್ತಿರುವುದರಿಂದ, 2019-20ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿವಿಧ ನಿಗಮಗಳು ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆ, ಸ್ವಯಂ ಉದ್ಯೋಗ ಯೋಜನೆ, ಉದ್ಯಮಶೀಲತೆ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆಗಳಿಗೆ ಈಗಾಗಲೇ ನಿಗಧಿಪಡಿಸಿರುವ ಗುರಿಯ ಜೊತೆಗೆ ಹೆಚ್ಚುವರಿಯಾಗಿ ಗುರಿ ನಿಗಧಿಪಡಿಸಲಾಗಿದೆ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ)	ಬಂದಿದ್ದಲ್ಲಿ, 2019-20ನೇ ಸಾಲಿನಲ್ಲಿ ವಿವಿಧ ನಿಗಮಗಳ ವಿವಿಧ ಯೋಜನೆಗಳಿಗೆ ನಿಗದಿಪಡಿಸಿದ ಗುರಿಗಳೇನು; (ವರ್ಷವಾರು ಮಾಹಿತಿಯನ್ನು ವಿವಿಧ ನಿಗಮವಾರು, ವಿಧಾನಸಭಾ ಕ್ಷೇತ್ರವಾರು ನೀಡುವುದು)	
ಈ)	ಜನಸಂಖ್ಯೆಗೆ ಅನುಗುಣವಾಗಿ ವಿವಿಧ ನಿಗಮಗಳ ಗುರಿಯನ್ನು ನಿಗದಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	ಪ್ರತಿ ಆರ್ಥಿಕ ವರ್ಷದಲ್ಲಿ ನಿಗಮಗಳಿಂದ ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಆಯಾ ಜಿಲ್ಲೆಗೆ ಆರ್ಥಿಕ ಮತ್ತು ಭೌತಿಕ ಗುರಿಯನ್ನು ನಿಗದಿಪಡಿಸಲಾಗುವುದು.

ಸಕಇ 133 ಎಸ್‌ಡಿಸಿ 2020

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ ಸಚಿವರು

ವಿಧಾನಸಭೆಯ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ. ಇವರ ಚುಕ್ಕೆ
ಗುರುತಿಲ್ಲದ ಪ್ರಶ್ನೆ ಸಂಖ್ಯೆ: 875 ಕ್ಕೆ ಅನುಬಂಧ
2019-20ನೇ ಸಾಲಿಗೆ ವಿವಿಧ ರೀತಿಯ ಕಾರ್ಯಕ್ರಮದಡಿ ಮೊದಲು ನಿಗದಿಪಡಿಸಿದ ಜಿಲ್ಲಾವಾರು ಗುರಿ

ಕ್ರ ಸಂ	ಜಿಲ್ಲೆ/ಕ್ಷೇತ್ರಗಳು	ಜನಸಂಖ್ಯೆ	ಉದ್ಯಮ ಶೀಲತಾ ಯೋಜನೆ-1		ಉದ್ಯಮ ಶೀಲತಾ ಯೋಜನೆ-2		ಉದ್ಯಮ ಶೀಲತಾ ಯೋಜನೆ-3		ಮೈಕ್ರೊ ಕ್ರೆಡಿಟ್ ಯೋಜನೆ (ಪ್ರೇರಣಾ ಯೋಜನೆ)			ಗಂಗಾ ಕಲ್ಯಾಣ		ಒಟ್ಟು			
ಶಿವಮೊಗ್ಗ																	
1	ಸಾಗರ	25101	2	7.00	1	5.00	1	5.00	8	1.20	0.80	14	42.97	**26**	**61.17**	**0.80**	**61.97**
2	ಸೊರಬ	39045	2	7.00	1	5.00	1	5.00	13	1.95	1.30	22	66.84	**39**	**85.79**	**1.30**	**87.09**
3	ಶಿಕಾರಿಪುರ	58775	3	10.50	1	5.00	1	5.00	19	2.85	1.90	34	100.61	**58**	**123.96**	**1.90**	**125.86**
4	ಶಿವಮೊಗ್ಗ ಗ್ರಾಮಾಂತರ	76982	4	14.00	1	5.00	1	5.00	25	3.75	2.50	44	131.78	**75**	**159.53**	**2.50**	**162.03**
5	ತೀರ್ಥಹಳ್ಳಿ	19284	1	3.50	0	0.00	0	0.00	6	0.90	0.60	11	33.01	**18**	**37.41**	**0.60**	**38.01**
6	ಶಿವಮೊಗ್ಗ ನಗರ	40737	2	7.00	1	5.00	1	5.00	13	1.95	1.30	0	0.00	**17**	**18.95**	**1.30**	**20.25**
7	ಭದ್ರಾವತಿ	48234	2	7.00	1	5.00	1	5.00	15	2.25	1.50	28	82.57	**47**	**101.82**	**1.50**	**103.32**
	ಒಟ್ಟು	**308158**	**16**	**56.00**	**6**	**30.00**	**6**	**30.00**	**99**	**14.85**	**9.90**	**153**	**457.79**	**280**	**588.64**	**9.90**	**598.54**

2019-20ನೇ ಸಾಲಿನಲ್ಲಿ ಜನಸಂಖ್ಯೆ ಅನುಗುಣವಾಗಿ ಹೆಚ್ಚುವರಿ ಗುರಿ

ಕ್ರ. ಸಂ	ನಿಗಮಗಳ ವಿವರ	ಯೋಜನೆಗಳ ವಿವರ	2019-20ನೇ ಸಾಲಿಗೆ ಹೆಚ್ಚುವರಿ ಗುರಿ ನಿಗಧಿಪಡಿಸಲು ತಿಳಿಸಿರುವ ವಿಧಾನ ಸಭಾ ಕ್ಷೇತ್ರ						
			ಶಿವಮೊಗ್ಗ ಗ್ರಾಮಾಂತರ	ಸೊರಬ	ಸಾಗರ	ಹೊಸನಗರ	ತೀರ್ಥಹಳ್ಳಿ	ಶಿವಮೊಗ್ಗ	ಭೈಂದೂರು
1	ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ	ಗಂಗಾ ಕಲ್ಯಾಣ ಯೋಜನೆ	50	20	10	10	25	25	10
		ಸ್ವಯೋ ಉದ್ಯೋಗ ಉದ್ಯಮ ಶೀಲತಾ ಯೋಜನೆ	10	05	02	02	05	05	02
		ಮೈಕ್ರೋ ಕ್ರೆಡಿಟ್ ಯೋಜನೆ	03	02	02	20	03	03	02
2	ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ	ಗಂಗಾ ಕಲ್ಯಾಣ ಯೋಜನೆ	30	30	30	20	30	30	30
		ಸ್ವಯೋ ಉದ್ಯೋಗ ಉದ್ಯಮ ಶೀಲತಾ ಯೋಜನೆ	10	10	10	03	10	10	10
		ಮೈಕ್ರೋ ಕ್ರೆಡಿಟ್ ಯೋಜನೆ	02	02	02	02	05	05	05
3	ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ	ಗಂಗಾ ಕಲ್ಯಾಣ ಯೋಜನೆ	30	30	30	20	30	30	30
		ಸ್ವಯೋ ಉದ್ಯೋಗ ಉದ್ಯಮ ಶೀಲತಾ ಯೋಜನೆ	10	10	10	03	10	10	10
		ಮೈಕ್ರೋ ಕ್ರೆಡಿಟ್ ಯೋಜನೆ	02	02	02	02	05	05	05
4	ಡಾ ಅಂಬೇಡ್ಕರ್ ಅಭಿವೃದ್ಧಿ ನಿಗಮ	ಗಂಗಾ ಕಲ್ಯಾಣ ಯೋಜನೆ	30	30	30	20	30	30	30
		ಸ್ವಯೋ ಉದ್ಯೋಗ ಉದ್ಯಮ ಶೀಲತಾ ಯೋಜನೆ	10	10	10	03	10	10	10
		ಮೈಕ್ರೋ ಕ್ರೆಡಿಟ್ ಯೋಜನೆ	02	02	02	02	05	05	05
5	ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ	ಗಂಗಾ ಕಲ್ಯಾಣ ಯೋಜನೆ	15	15	05	05	10	15	15
		ಸ್ವಯೋ ಉದ್ಯೋಗ ಉದ್ಯಮ ಶೀಲತಾ ಯೋಜನೆ	02	02	02	02	02	02	02
		ಮೈಕ್ರೋ ಕ್ರೆಡಿಟ್ ಯೋಜನೆ	02	02	02	02	02	02	02

ಕರ್ನಾಟಕ ಸರ್ಕಾರ

ಸಂಖ್ಯೆ: ವಇ 75 ಹೆಚ್‌ಎಎಂ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 07/03/2020

64
9/3/2020

ಇಂದ:

ಸರ್ಕಾರದ ಕಾರ್ಯದರ್ಶಿ,
ವಸತಿ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,

ಮಾನ್ಯರೇ.,

ವಿಷಯ: ಕರ್ನಾಟಕ ವಿಧಾನ ~~ಪರಿಷತ್ತಿನ~~ ಸಭೆಯ **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1007**ಕ್ಕೆ ಉತ್ತರಿಸುವ ಬಗ್ಗೆ.
ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.1007/2020, ದಿನಾಂಕ: 27/02/2020.

*****

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ **ಹ್ಯಾರೀಸ್ ಎನ್.ಎ. (ಶಾಂತಿನಗರ ವಿಧಾನ ಸಭಾ ಕ್ಷೇತ್ರ)** ಇವರ **ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 1007ಕ್ಕೆ ಉತ್ತರದ 100 ಪ್ರತಿಗಳನ್ನು** ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಮಾಳಪ್ಪ ವೈ. ಕನ್ನೂರ)
ಶಾಖಾಧಿಕಾರಿ–2,
ವಸತಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನಸಭೆ ಸದಸ್ಯರ ಹೆಸರು:	ಶ್ರೀ ಹ್ಯಾರಿಸ್ ಎನ್.ಎ.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	1007
ಉತ್ತರಿಸ ಬೇಕಾದ ದಿನಾಂಕ:	09.03.2020
ಉತ್ತರಿಸುವ ಸಚಿವರು	ಶ್ರೀ ವಿ.ಸೋಮಣ್ಣ, ವಸತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ವಸತಿ ಯೋಜನೆಗಳ ಅನುಷ್ಠಾನಕ್ಕೆ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಕೇಂದ್ರ ಸರ್ಕಾರದವರು ಮಂಜೂರು ಮಾಡಿರುವ ಅನುದಾನವೆಷ್ಟು (ವಿವರ ನೀಡುವುದು);	ಕಳೆದ ಮೂರು ವರ್ಷಗಳಲ್ಲಿ ಅಂದರೆ 2016-17 ರಿಂದ 2018-19 ನೇ ಸಾಲಿನವರೆಗೆ ರಾಜ್ಯದಲ್ಲಿ ವಸತಿ ಯೋಜನೆಗಳ ಅನುಷ್ಠಾನಕ್ಕೆ ಪ್ರಧಾನ ಮಂತ್ರಿ ಆವಾಸ್ ಗ್ರಾಮೀಣ ಮತ್ತು ನಗರ ಯೋಜನೆಗಳ ಅಡಿಯಲ್ಲಿ ಕೇಂದ್ರ ಸರ್ಕಾರದವರು ರೂ.2,851.56ಕೋಟಿಗಳನ್ನು ಮಂಜೂರು ಮಾಡಿ ರಾಜ್ಯಕ್ಕೆ ಬಿಡುಗಡೆ ಮಾಡಲಾಗಿದೆ. ವಿವರ ಈ ಕೆಳಗಿನಂತಿದೆ. (ರೂ. ಕೋಟಿಗಳಲ್ಲಿ)

ಯೋಜನೆಯ ಹೆಸರು	2016-17	2017-18	2018-19	ಒಟ್ಟು
ಪ್ರಧಾನ ಮಂತ್ರಿ ಅವಾಸ್ ಯೋಜನೆ - ಗ್ರಾಮೀಣ	260.49	611.20	188.20	1059.89
ಪ್ರಧಾನ ಮಂತ್ರಿ ಅವಾಸ್ ಯೋಜನೆ - ನಗರ	190.33	168.32	1433.02	1791.67
ಒಟ್ಟು	450.82	779.52	1621.22	2851.56

ಕ್ರ.ಸಂ	ಪ್ರಶ್ನೆ	ಉತ್ತರ
ಆ)	ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ವಸತಿ/ನಿವೇಶನಗಳನ್ನು ವಿತರಿಸಲಾಗಿದೆ;	ಕಳೆದ ಮೂರು ವರ್ಷಗಳಲ್ಲಿ ಅಂದರೆ 2016-17 ರಿಂದ 2018-19ರ ಅರ್ಥಿಕ ವರ್ಷಗಳಲ್ಲಿ **908283** ಮನೆಗಳನ್ನು ಫಲಾನುಭವಿಗಳು ನಿರ್ಮಿಸಿಕೊಂಡಿದ್ದಾರೆ ಹಾಗೂ **37,199** ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ.

ಇ)	ರಾಜ್ಯದಲ್ಲಿನ ಎಲ್ಲಾ ವಸತಿಹೀನರಿಗೆ ವಸತಿ ಸೌಲಭ್ಯಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಿಯಾ ಯೋಜನೆಗಳು ಯಾವುವು (ವಿವರ ನೀಡುವುದು) ?	ಇತ್ತೀಚಿಗೆ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೂಲಕ ರಾಜ್ಯದಲ್ಲಿ ವಸತಿರಹಿತ ಮತ್ತು ನಿವೇಶನರಹಿತರ ಸಮೀಕ್ಷೆ ಮಾಡಲಾಗಿದ್ದು, ಆ ಸಮೀಕ್ಷೆ ವರದಿ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ **18,73,134** ವಸತಿರಹಿತರು ಮತ್ತು **6,54,586** ನಿವೇಶನರಹಿತರು ಹಾಗೂ ನಗರ ಪ್ರದೇಶದಲ್ಲಿ **2,96,469** ವಸತಿರಹಿತರು ಮತ್ತು **8,45,488** ನಿವೇಶನರಹಿತರು ಕಂಡುಬಂದಿದೆ. ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿ ಈ ಕೆಳಗೆ ತಿಳಿಸಿರುವ ಯೋಜನೆಗಳ ಮೂಲಕ ವಸತಿ ಮತ್ತು ನಿವೇಶನಗಳಲ್ಲಿ ಗುರಿ ನಿಗದಿಪಡಿಸಿ ಹಂತ ಹಂತವಾಗಿ ಎಲ್ಲರಿಗೂ ವಸತಿ ಮತ್ತು ನಿವೇಶನಗಳನ್ನು ಕಲ್ಪಿಸಲಾಗುವುದು. **ವಸತಿ ಯೋಜನೆ** 1. ಬಸವ ವಸತಿ ಯೋಜನೆ 2. ಡಾ॥ ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ ಹಾಗೂ ನಗರ) 3. ದೇವರಾಜು ಅರಸು ಯೋಜನೆ (ಗ್ರಾಮೀಣ ಹಾಗೂ ನಗರ) 4. ವಾಜಪೇಯಿ ನಗರ ವಸತಿ ಯೋಜನೆ 5. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) (ಕೇಂದ್ರ ಸರ್ಕಾರ ಪುರಸ್ಕೃತ) 6. ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) (ಕೇಂದ್ರ ಸರ್ಕಾರ ಪುರಸ್ಕೃತ) **ನಿವೇಶನ ಯೋಜನೆ** 1. ಇಂದಿರಾ ಗ್ರಾಮೀಣ ವಸತಿ ನಿವೇಶನ ಯೋಜನೆ 2. ವಾಜಪೇಯಿ ನಗರ ನಿವೇಶನ ಯೋಜನೆ

ವ ಇ 75 ಹೆಚ್‌ಎಎಂ 2020

(ವಿ.ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ವಇ 68 ಹೆಚ್‌ಎಎಂ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 07/03/2020

17
9/3/2020

ಇಂದ:

ಸರ್ಕಾರದ ಕಾರ್ಯದರ್ಶಿ,
ವಸತಿ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,

ಮಾನ್ಯರೇ.,

ವಿಷಯ: ಕರ್ನಾಟಕ ವಿಧಾನ ~~ಪರಿಷತ್ತಿನ~~ ಸಭೆ **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 876ಕ್ಕೆ** ಉತ್ತರಿಸುವ ಬಗ್ಗೆ.
ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.876/2020, ದಿನಾಂಕ: 27/02/2020.

*****

ಮಾನ್ಯ ವಿಧಾನ ಸಭೆಯ ಸದಸ್ಯರಾದ **ಶ್ರೀ ಅಶೋಕ್ ನಾಯಕ್** ಕೆ.ಬಿ. (ಶಿವಮೊಗ್ಗ ಗ್ರಾಮಾಂತ್ರ **ವಿಧಾನಸಭಾ ಕ್ಷೇತ್ರ)**, ಇವರ **ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 876ಕ್ಕೆ ಉತ್ತರದ 100** ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಮಾಳಪ್ಪ ವೈ. ಕನ್ನೂರ)
ಶಾಖಾಧಿಕಾರಿ-2,
ವಸತಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನಸಭೆ ಸದಸ್ಯರ ಹೆಸರು:	ಶ್ರೀ ಅಶೋಕ್ ನಾಯಕ್ ಕೆ.ಬಿ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	876
ಉತ್ತರಿಸ ಬೇಕಾದ ದಿನಾಂಕ:	09.03.2020
ಉತ್ತರಿಸುವ ಸಚಿವರು	ಶ್ರೀ ವಿ.ಸೋಮಣ್ಣ, ವಸತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ವಸತಿ ಯೋಜನೆಯಡಿ ಮಂಜೂರಾದ ಮನೆಗಳಿಗೆ ಇದುವರೆಗೂ ಅನುದಾನ ಬಿಡುಗಡೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಜುಲೈ-2019ರ ಅಂತ್ಯದವರೆಗೆ ಪ್ರಗತಿಗೆ ತಕ್ಕಂತೆ ಅನುದಾನದ ಬಿಡುಗಡೆಗೊಳಿಸಲಾಗಿದ್ದು, ತದನಂತರ ಭೌತಿಕ ಪ್ರಗತಿಗೆ ಅನುಗುಣವಾಗಿ ಬಿಡುಗಡೆ ಮಾಡಲು ಬಾಕಿ ಇರುವ ಮನೆಗಳಿಗೆ ಸರ್ಕಾರದ ಆದೇಶದಂತೆ ವಸತಿ ವಿಜಿಲ್ ಆಪ್ ಮುಖಾಂತರ ಜಿ.ಪಿ.ಎಸ್ ಗೆ ಅಳವಡಿಸಿ ಅರ್ಹ ಫಲಾನುಭವಿಗಳಿಗೆ ಪ್ರತಿ ವಾರವು ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ.
ಆ)	ಬಂದಿದ್ದಲ್ಲಿ, ಪ್ರಗತಿಯಲ್ಲಿರುವ ಮನೆಗಳಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	
ಇ)	ತಳಪಾಯ ಹಾಕಿಕೊಂಡಿರುವ ಮನೆಗಳನ್ನು ಸಹ ವಸತಿ ನಿಗಮದಿಂದ ಬ್ಲಾಕ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವಾಗ ಅನ್ ಬ್ಲಾಕ್ ಮಾಡಲಾಗುವುದು;	ವಿವಿಧ ಕಾರಣಗಳಿಂದ ಬ್ಲಾಕ್ ಆಗಿರುವ ಮನೆಗಳಿಗೆ ಒಂದು ತಿಂಗಳ ಕಾಲಾವಕಾಶ ನೀಡಿ, ಪ್ರಾರಂಭಗೊಳ್ಳುವ ಮನೆಗಳನ್ನು ಜಿ.ಪಿ.ಎಸ್‌ಗೆ ಅಳವಡಿಸಿ ಪ್ರಗತಿಗೆ ಪರಿಗಣಿಸಿಕೊಳ್ಳಲು ದಿನಾಂಕ:29.01.2020ರಂದು ನಡೆದ ಸಚಿವ ಸಂಪುಟದ ಉಪ ಸಮಿತಿಯ 2ನೇ ಸಭೆಯಲ್ಲಿ ಕೈಗೊಂಡ ನಿರ್ಣಯದ ರೀತ್ಯಾ ದಿನಾಂಕ: 14.02.2020ರ ಸರ್ಕಾರಿ ಆದೇಶದನ್ವಯ ಬ್ಲಾಕ್ ಮಾಡಲಾಗಿದ್ದ ಮನೆಗಳನ್ನು ಅನ್ ಬ್ಲಾಕ್ ಮಾಡಿ ಒಂದು ತಿಂಗಳ ಕಾಲಾವಕಾಶ ನೀಡಿ ವಾಸ್ತವವಾಗಿ ಪ್ರಾರಂಭವಾಗಿರುವ ಮನೆಗಳ ಛಾಯಾಚಿತ್ರಗಳನ್ನು ಅಳವಡಿಸಲು ಅವಕಾಶ ಕಲ್ಪಿಸಲಾಗಿದೆ.

ಈ)	ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ಎಷ್ಟು ಮನೆಗಳು ಬ್ಲಾಕ್ ಆಗಿವೆ;	ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬ್ಲಾಕ್ ಆದ 1728 ಮನೆಗಳು ಅನ್ ಬ್ಲಾಕ್ ಆಗಿದ್ದು, ಈ ಪೈಕಿ 45 ಮನೆಗಳ ತಳಪಾಯ ಹಂತದ ಪ್ರಗತಿಯನ್ನು ಜಿ.ಪಿ.ಎಸ್ ಗೆ ಅಳವಡಿಸಲಾಗಿದೆ. ಇನ್ನುಳಿದ 1715 ಮನೆಗಳನ್ನು ಜಿ.ಪಿ.ಎಸ್ ಗೆ ಅಳವಡಿಸಲು ಬಾಕಿ ಇರುತ್ತದೆ. ಗ್ರಾಮ ಪಂಚಾಯಿತಿವಾರು ವಿವರ ಅನುಬಂಧದಲ್ಲಿ ಒದಗಿಸಿದೆ.
ಉ)	ಇವುಗಳಲ್ಲಿ ಪ್ರಾರಂಭಿಸದೇ ಇರುವ ತಳಪಾಯ ಹಾಕಿಕೊಂಡಿರುವ ಮನೆಗಳು ಎಷ್ಟು; ಈ ಮನೆಗಳಲ್ಲಿ ಮನೆಗಳನ್ನು ಅನ್ ಬ್ಲಾಕ್ ಮಾಡಲಾಗಿದೆ?(ಗ್ರಾಮ ಪಂಚಾಯಿತಿವಾರು ವಿವರ ನೀಡುವುದು)	

ವ ಇ 68 ಹೆಚ್‌ಎಂ 2020

(ವಿ.ಸೋಮಣ್ಣ)
ವಸತಿ ಸಚಿವರು

4

ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅನ್ ಬ್ಲಾಕ್ ಆಗಿ ತಳಪಾಯ ಹಂತದಲ್ಲಿರುವ ಮನೆಗಳ ವಿವರ					LAQ -876 ಅನುಬಂಧ-1
ಕ್ರ. ಸಂ	ಜಿಲ್ಲೆ	ವಿಧಾನಸಭಾ ಕ್ಷೇತ್ರ	ಗ್ರಾಮಪಂಚಾಯತಿ	ಅನ್ ಬ್ಲಾಕ್ ಮಾಡಲಾದ ಮನೆಗಳು	ಅನ್ ಬ್ಲಾಕ್ ಮಾಡಲಾದ ಮನೆಗಳಲ್ಲಿ ಪ್ರಾರಂಭವಾದ ಮನೆಗಳು
1	Shivamogga	Shimoga Rural	Abbalagere	64	4
2	Shivamogga	Shimoga Rural	Agaradahalli	66	0
3	Shivamogga	Shimoga Rural	Agasavalli	13	2
4	Shivamogga	Shimoga Rural	Anaveri	44	0
5	Shivamogga	Shimoga Rural	Arahatholalu	32	0
6	Shivamogga	Shimoga Rural	Arakere	28	0
7	Shivamogga	Shimoga Rural	Arebilachi	46	0
8	Shivamogga	Shimoga Rural	Ayanuru-i	44	1
9	Shivamogga	Shimoga Rural	B.beeranahalli	65	1
10	Shivamogga	Shimoga Rural	Balekoppa	31	0
11	Shivamogga	Shimoga Rural	Bedara Hosahalli	19	0
12	Shivamogga	Shimoga Rural	Bidare	27	0
13	Shivamogga	Shimoga Rural	Choradi	29	0
14	Shivamogga	Shimoga Rural	Dasarakallahalli	21	0
15	Shivamogga	Shimoga Rural	Emmehatti	9	0
16	Shivamogga	Shimoga Rural	Gudumagatta	15	0
17	Shivamogga	Shimoga Rural	Hadonahalli	37	2
18	Shivamogga	Shimoga Rural	Hanumanthapura	51	0
19	Shivamogga	Shimoga Rural	Haramagatta	54	3
20	Shivamogga	Shimoga Rural	Haranahalli	9	0
21	Shivamogga	Shimoga Rural	Hasudi	26	1
22	Shivamogga	Shimoga Rural	Holaluru	19	0
23	Shivamogga	Shimoga Rural	Holebenavalli	68	0
24	Shivamogga	Shimoga Rural	Holehonnuru-i	25	0
25	Shivamogga	Shimoga Rural	Kallahal	44	0
26	Shivamogga	Shimoga Rural	Ko Halli	20	0
27	Shivamogga	Shimoga Rural	Kommanalu	62	4
28	Shivamogga	Shimoga Rural	Konagavalli	31	3
29	Shivamogga	Shimoga Rural	Koralahalli	29	3
30	Shivamogga	Shimoga Rural	Koteganguru	41	1
31	Shivamogga	Shimoga Rural	Kudli	15	1
32	Shivamogga	Shimoga Rural	Kumsi	30	0
33	Shivamogga	Shimoga Rural	Kunchenahalli	42	1
34	Shivamogga	Shimoga Rural	Mallapura	30	1
35	Shivamogga	Shimoga Rural	Mandagatta	22	1
36	Shivamogga	Shimoga Rural	Mangote	14	0
37	Shivamogga	Shimoga Rural	Marashettyhalli	23	0
38	Shivamogga	Shimoga Rural	Melinahanasavadi	18	2
39	Shivamogga	Shimoga Rural	Muddina Koppa	25	0
40	Shivamogga	Shimoga Rural	Mydolalu	24	0
41	Shivamogga	Shimoga Rural	Nidige-i	46	0
42	Shivamogga	Shimoga Rural	Nimbegondi	22	0

3

ಕ್ರ. ಸಂ	ಜಿಲ್ಲೆ	ವಿಧಾನಸಭಾ ಕ್ಷೇತ್ರ	ಗ್ರಾಮಪಂಚಾಯತಿ	ಅನ್ ಬ್ಲಾಕ್ ಮಾಡಲಾದ ಮನೆಗಳು	ಅನ್ ಬ್ಲಾಕ್ ಮಾಡಲಾದ ಮನೆಗಳಲ್ಲಿ ಪ್ರಾರಂಭವಾದ ಮನೆಗಳು
43	Shivamogga	Shimoga Rural	Pillangere	9	0
44	Shivamogga	Shimoga Rural	Puradalu	11	1
45	Shivamogga	Shimoga Rural	Ramanagara	27	3
46	Shivamogga	Shimoga Rural	Sannyasikodamagge	12	0
47	Shivamogga	Shimoga Rural	Santhekaduru	24	1
48	Shivamogga	Shimoga Rural	Shettyhalli	28	3
49	Shivamogga	Shimoga Rural	Sidlipura	23	0
50	Shivamogga	Shimoga Rural	Sirigere	32	1
51	Shivamogga	Shimoga Rural	Sogane	26	0
52	Shivamogga	Shimoga Rural	Suguru	50	2
53	Shivamogga	Shimoga Rural	Sydarakallahalli	27	0
54	Shivamogga	Shimoga Rural	Thammadihalli	21	2
55	Shivamogga	Shimoga Rural	Thuppuru	18	1
56	Shivamogga	Shimoga Rural	Yedehalli	40	0
Total				**1728**	**45**

D. Ravikumar

ಡಿ. ರವಿಕುಮಾರ್
ಸಹಾಯಕ ಪ್ರಧಾನ ವ್ಯವಸ್ಥಾಪಕರು (ತಾ.ಅ.)
ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ ..119... ಟಿಎನ್ಆರ್ 2020

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:....7..../03/2020

164

U/S
9/3/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ,
ಬೆಂಗಳೂರು

ಮಾನ್ಯರೇ;

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ/~~ಶ್ರೀಮತಿ~~...ಸಿದ್ದು ಸವದಿ (ತೇರದಾಳ) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:.........934........ ಕ್ಕೆ ಉತ್ತರಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ/~~ಶ್ರೀಮತಿ~~...ಸಿದ್ದು ಸವದಿ (ತೇರದಾಳ). ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:.......934.......... ಕ್ಕೆ ಉತ್ತರದ 100..........ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

(ಅರುಣ್.ಎಸ್)
ಶಾಖಾಧಿಕಾರಿ
ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	934
ಸದಸ್ಯರ ಹೆಸರು	:	ಶ್ರೀ ಸಿದ್ದು ಸವದಿ (ತೇರದಾಳ)
ಉತ್ತರಿಸಬೇಕಾದ ದಿನಾಂಕ	:	09-03-2020
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಪ್ರಶ್ನೆ		ಉತ್ತರ
(ಅ)	ಪ್ರಸಕ್ತ ವರ್ಷದ ಪ್ರವಾಹದಲ್ಲಿ ಮತ್ತು ಅತಿವೃಷ್ಟಿಯಲ್ಲಿ ಹಾನಿಗೊಳಗಾದ ಒಟ್ಟು ಬೆಳೆಯ ಪ್ರಮಾಣವೆಷ್ಟು; ಇವೆಲ್ಲದ್ದಕ್ಕೂ ಪರಿಹಾರ ಕೊಡಲಾಗಿದೆಯೇ; ಇಲ್ಲವಾದಲ್ಲಿ ಯಾವಾಗ ನೀಡಲಾಗುತ್ತದೆ;	ಪ್ರಸಕ್ತ ಸಾಲಿನ ಪ್ರವಾಹದಿಂದ ಈ ಕೆಳಕಂಡಂತೆ ಬೆಳೆಹಾನಿಯಾಗಿರುತ್ತದೆ. 7,54,191 ಹೆಕ್ಟೇರ್ ಕೃಷಿ ಬೆಳೆ 1,09,492 ಹೆಕ್ಟೇರ್ ತೋಟಗಾರಿಕೆ ಬೆಳೆ 1,06,425 ಹೆಕ್ಟೇರ್ ಕಾಫಿ ಬೆಳೆ 244 ಹೆಕ್ಟೇರ್ ರೇಷ್ಮೆ ಬೆಳೆ ಬೆಳೆಹಾನಿ ಪರಿಹಾರಕ್ಕಾಗಿ ಇನ್‌ಪುಟ್ ಸಬ್ಸಿಡಿಯನ್ನು ಪರಿಹಾರ ತಂತ್ರಾಂಶದ ಮೂಲಕ ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿದೆ.
(ಆ)	ಸದರಿ ದುರ್ಘಟನೆಗಳಲ್ಲಿ ಯಾವ ಆಸ್ತಿಗಳು ಎಷ್ಟು ಪ್ರಮಾಣದಲ್ಲಿ ಹಾನಿಯಾಗಿವೆ; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ಒದಗಿಸುವುದು)	ಪ್ರವಾಹದಿಂದ ಹಾನಿಯಾದ ಮೂಲಭೂತ ಸೌಕರ್ಯಗಳ ವಿವರ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ)
(ಇ)	ನೆರೆ ಮತ್ತು ಅತಿವೃಷ್ಟಿಯಿಂದ ನಲುಗಿದ ಸಂತ್ರಸ್ಥರಿಗೆ ಯಾವ ರೀತಿ ಪರಿಹಾರ ಕೊಡಲಾಗಿದೆ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)	ಪ್ರವಾಹ ಪರಿಹಾರಕ್ಕಾಗಿ ಸರ್ಕಾರದಿಂದ ಕೈಗೊಂಡ ಕ್ರಮಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಕ್ರಸಂ	ವಿವರ	ಪ್ರಮಾಣ	ಅಂದಾಜು ನಷ್ಟ (ರೂ.ಕೋಟಿಗಳಲ್ಲಿ)
1	ರಸ್ತೆಗಳು	21,818 ಕಿ.ಮೀ	7034.03
2	ಸೇತುವೆಗಳು	2913	1020.09
3	ಸಣ್ಣ ನೀರಾವರಿ ಯೋಜನೆಗಳು	1165	363.15
4	ವಿದ್ಯುತ್ ಸಲಕರಣೆಗಳು		278.58
5	ನೀರಾವರಿ ಕೆರೆಗಳು (ಸಣ್ಣ ನೀರಾವರಿ ಹಾಗೂ ಜಿ.ಪಂ)	1550	63.61
6	ಸರ್ಕಾರಿ ಕಟ್ಟಡಗಳು	11063	760.27
7	ಕುಡಿಯುವ ನೀರು ಮತ್ತು ನೈರ್ಮಲ್ಯ	2624	122.94
	ಒಟ್ಟು		9642.67

ಕಂಇ 119 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಚು.ಗು.ಪ್ರ. ಸಂ: 934 ಕ್ಕೆ ಅನುಬಂಧ

<u>ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)</u>

<u>ಪ್ರವಾಹ ಪರಿಸ್ಥಿತಿ:</u>

ಬರದ ಛಾಯೆಯಲ್ಲಿದ್ದ ಕರ್ನಾಟಕ ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಸುರಿದ ಭಾರಿ ಮಳೆ ಹಾಗೂ ಮಹಾರಾಷ್ಟ್ರ ರಾಜ್ಯದ ಅಣೆಕಟ್ಟುಗಳಿಂದ ಕೃಷ್ಣಾ ನದಿಗೆ ಭಾರಿ ಪ್ರಮಾಣದಲ್ಲಿ ನೀರು ಹರಿದ ಪರಿಣಾಮವಾಗಿ ತೀವ್ರ ಸ್ವರೂಪದ ಪ್ರವಾಹ ಪರಿಸ್ಥಿತಿ ಉಂಟಾಯಿತು. ಮುಂಗಾರು ಋತುವಿನಲ್ಲಿ ವಾಡಿಕೆ ಸರಾಸರಿ ಮಳೆಗಿಂತ ಶೇ.16 ರಷ್ಟು ಹಾಗೂ ಹಿಂಗಾರು ಋತುವಿನಲ್ಲಿ ವಾಡಿಕೆಗಿಂತ ಶೇ.85ರಷ್ಟು ಹೆಚ್ಚು ಮಳೆಯಾಗಿದೆ. ಆಗಸ್ಟ್ 3ರಿಂದ 10ರ ವರೆಗೆ ಸುರಿದ ಮಳೆಯು ಕಳೆದ 118 ವರ್ಷಗಳಲ್ಲಿಯೇ ದಾಖಲೆ ಮಳೆಯಾಗಿದೆ.

2019–20ನೇ ಸಾಲಿನಲ್ಲಿ 25 ಜಿಲ್ಲೆಗಳ 119 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ.

ಸರ್ಕಾರ ಹಾಗೂ ಜಿಲ್ಲಾಡಳಿತಗಳ ಪೂರ್ವ ಸಿದ್ಧತೆ ಹಾಗೂ ನೆರೆಯ ರಾಜ್ಯದೊಂದಿಗೆ ಸಮನ್ವಯದಿಂದಾಗಿ ಹೆಚ್ಚಿನ ಅನಾಹುತವಾಗದಂತೆ ತಡೆಯಲಾಯಿತು. ಕೇಂದ್ರ ಸರ್ಕಾರದ ನೆರವಿನೊಂದಿಗೆ ಜನರ ಸಂಕಷ್ಟಕ್ಕೆ ತಕ್ಷಣವೇ ಸ್ಪಂದಿಸಿ ಸುಮಾರು 7 ಲಕ್ಷ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಕರ್ನಾಟಕದ ಇತಿಹಾಸದಲ್ಲೇ ಅತಿ ದೊಡ್ಡದಾದ ರಕ್ಷಣಾ ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿತ್ತು. ಎನ್‌ಡಿಆರ್‌ಎಫ್, ಸೇನಾಪಡೆಗಳು, ಕರಾವಳಿ ರಕ್ಷಣಾ ಪಡೆ, ರಾಜ್ಯ ಅಗ್ನಿಶಾಮಕದಳ, ಪೊಲೀಸರು, ಗೃಹ ರಕ್ಷಕದಳ ಮತ್ತಿತರ ತಂಡಗಳು ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದವು.

ನೆರೆ ಪೀಡಿತ ಪ್ರದೇಶಗಳಲ್ಲಿ ಈವರೆಗೆ ಕೈಗೊಳ್ಳಲಾಗಿರುವ ಪರಿಹಾರ ಕಾಮಗಾರಿಗಳ ವಿವರ:

1. ಪ್ರವಾಹದಿಂದ 137 ಮೃತಪಟ್ಟ ಜನರ ವಾರಸುದಾರರಿಗೆ ತಲಾ ರೂ. 7.00 ಲಕ್ಷ ಗಳನ್ನು ವಿತರಿಸಲಾಗಿದೆ. **(ಎನ್.ಡಿ.ಆರ್.ಎಫ್ ಮಾರ್ಗಸೂಚಿ ಅನುಸಾರ ರೂ. 4.00 ಲಕ್ಷಗಳು, ರೂ 1.00 ಲಕ್ಷಗಳನ್ನು ಮಾನ್ಯ ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ಹಾಗೂ ರೂ. 2.00 ಲಕ್ಷಗಳನ್ನು ಮಾನ್ಯ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ವಿತರಿಸಲಾಗಿದೆ).**

2. ಆಗಸ್ಟ್ 2019ರ ಮಾಹೆಯಲ್ಲಿ ನೆರೆ ಹಾವಳಿಯಿಂದ ಮನೆ ಹಾನಿಯಾದ ಬಾಧಿತ ಕುಟುಂಬಗಳಿಗೆ ಗೃಹೋಪಯೋಗಿ ಸಲಕರಣೆಗಳನ್ನು (Clothing and Utensils) ಖರೀದಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಪ್ರತಿ ಕುಟುಂಬಕ್ಕೆ ರೂ.3,800/–ಗಳನ್ನು ನಿಗದಿಪಡಿಸಿದ್ದು, ಇದರ ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ರೂ.6,200/– ಸೇರಿ ಒಟ್ಟು ರೂ.10,000/–ಕ್ಕೆ ಹೆಚ್ಚಿಸಿ ವಿಶೇಷ ಪ್ರಕರಣವೆಂದು ಅನುದಾನ ಬಿಡುಗಡೆ ಮಾಡಲಾಗಿದೆ. 2.07 ಲಕ್ಷ ಕುಟುಂಬಗಳಿಗೆ ರೂ.207 ಕೋಟಿ ಅನುದಾನವನ್ನು ಪಾವತಿಸಲಾಗಿದೆ.

3. i. ಪ್ರವಾಹದಿಂದ ಹಾನಿಗೊಳಗಾದ ದೋಣಿಗಳಿಗೆ ತಲಾ ರೂ.7,000/–ರಂತೆ ಹಾಗೂ ಬಲೆಗಳಿಗೆ ತಲಾ ರೂ.1,850/–ರಂತೆ ಕೇಂದ್ರ ಸರ್ಕಾರದ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಫ್ ಮಾರ್ಗಸೂಚಿಯನ್ವಯ ನಿಗದಿಪಡಿಸಿದ್ದು, ಹಾನಿಗೊಳಗಾದ 661 ದೋಣಿಗಳಿಗೆ ಹಾಗೂ ಹಾನಿಗೊಳಗಾದ 1421 ಬಲೆಗಳಿಗೆ ಒಟ್ಟು ರೂ.85.89 ಲಕ್ಷಗಳನ್ನು ಪಾವತಿಸಲಾಗಿದೆ.

   ii. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಹದಿಂದ ಹಾನಿಗೊಳಗಾದ ಮೀನುಗಾರರ 168 ದೋಣಿಗಳಿಗೆ ಎಸ್.ಡಿ.ಆರ್.ಎಫ್ ಮಾರ್ಗಸೂಚಿ ಮೊತ್ತದೊಂದಿಗೆ ಹೆಚ್ಚುವರಿಯಾಗಿ ರೂ 20,000/– ಮತ್ತು 460 ಬಲೆಗಳಿಗೆ ಎಸ್.ಡಿ.ಆರ್. ಎಫ್ ಮಾರ್ಗಸೂಚಿ ಮೊತ್ತದೊಂದಿಗೆ ಹೆಚ್ಚುವರಿಯಾಗಿ ರೂ.10,000/– ರಂತೆ ಒಟ್ಟು ರೂ. 79,60,000/– ಅನುದಾನವನ್ನು ವಿಶೇಷ ಪ್ರಕರಣವಾಗಿ ಪರಿಗಣಿಸಿ ರಾಜ್ಯ ಸರ್ಕಾರದಿಂದ ಪಾವತಿಸಲಾಗಿದೆ.

4. ಪ್ರವಾಹದಿಂದ ಹಾನಿಗೊಳಗಾದ ನೇಕಾರರ ಉಪಕರಣಗಳಿಗೆ ರೂ.4,100/– ಹಾಗೂ ಕಚ್ಚಾಮಾಲು/ ಸಿದ್ಧಪಡಿಸಿದ ವಸ್ತುಗಳಿಗೆ ರೂ.4,100/–ರಂತೆ ಕೇಂದ್ರ ಸರ್ಕಾರದ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಫ್ ಮಾರ್ಗಸೂಚಿಯನ್ವಯ ನಿಗದಿಪಡಿಸಿದ್ದು, ಹೆಚ್ಚುವರಿಯಾಗಿ ಹಾನಿಗೊಳಗಾದ ಕೈಮಗ್ಗ/ವಿದ್ಯುತ್ ಮಗ್ಗಗಳಿಗೆ ತಲಾ ರೂ.25,000/–ಗಳಂತೆ ಹಾಗೂ ಹಾನಿಗೊಳಗಾದ ಕಚ್ಚಾಮಾಲು/ ಸಿದ್ಧಪಡಿಸಿದ ವಸ್ತುಗಳಿಗೆ ಪ್ರತಿ ಸಂತ್ರಸ್ಥರಿಗೆ ತಲಾ ರೂ.25,000/–ರಂತೆ ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆ ಮಾಡಲಾಗಿದೆ.

5. ಕೇಂದ್ರ ಸರ್ಕಾರದ ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಪೂರ್ಣ/ತೀವ್ರ ಹಾನಿಯಾದ ಮನೆಗಳಿಗೆ ತಲಾ ಹಾಗೂ ಭಾಗಶಃ ಹಾನಿಯಾದ ಮನೆಗಳಿಗೆ ತಲಾ ರೂ.5,200/– ನಿಗದಿಪಡಿಸಿದ್ದು, ನೆರೆ ಹಾವಳಿಯಿಂದ ಮನೆ ಕಳೆದುಕೊಂಡ ಸಂತ್ರಸ್ಥರ ಪೂರ್ಣ ಹಾನಿಯಾದ ಮನೆಗಳಿಗೆ ರೂ.5.00ಲಕ್ಷದಂತೆ, ತೀವ್ರ

ಹಾನಿಯಾದ ಮನೆಗಳಿಗೆ ತಲಾ ರೂ.3.00 ಲಕ್ಷಗಳನ್ನು ಹಾಗೂ ಭಾಗಶಃ ಹಾನಿಯಾದ ಮನೆಗಳಿಗೆ ತಲಾ ರೂ.50,000/-ಗಳ ಹೆಚ್ಚುವರಿ ಆರ್ಥಿಕ ನೆರವನ್ನು ನೀಡುವ ಮೂಲಕ ಹಾನಿಯಾದ ಮನೆಗಳ ಮನರ್ ನಿರ್ಮಾಣಕ್ಕಾಗಿ ವ್ಯವಸ್ಥೆ ಕಲ್ಪಿಸಿದೆ. ಈ ಆರ್ಥಿಕ ಸಹಾಯವು ದೇಶದಲ್ಲೇ ಅತ್ಯಂತ ಹೆಚ್ಚಿನ ನೆರವು. ಇದುವರೆಗೆ ರೂ.911.28 ಕೋಟಿಗಳನ್ನು 1,25,795 ಹಾನಿಗೊಳಗಾದ ಮನೆಗಳ ನಿರ್ಮಾಣಕ್ಕಾಗಿ ನೀಡಿದೆ. (ಆಗಸ್ಟ್ ಮಾಹೆಯಲ್ಲಿ 1,01,558 ಮನೆ ಹಾಗೂ ಸೆಪ್ಟೆಂಬರ್ & ಅಕ್ಟೋಬರ್ ಮಾಹೆಯಲ್ಲಿ 24,237 ಮನೆ ಹಾನಿಯಾಗಿರುತ್ತದೆ.) ಪೂರ್ಣ ಮನೆ ಹಾನಿಯಾದ 2020 ಫಲಾನುಭವಿಗಳಿಗೆ ತಾತ್ಕಲಿಕ ಶೆಡ್ ನಿರ್ಮಾಣಕ್ಕಾಗಿ ತಲಾ ರೂ. 50,000/- ದಂತೆ ರೂ. 10.10 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

6. ರೂ. 5.00 ಲಕ್ಷ ಪರಿಹಾರಕ್ಕಾಗಿ ಅರ್ಹರಾದ ಕುಟುಂಬಗಳಿಗೆ ಗರಿಷ್ಠ 10 ತಿಂಗಳ ಅವಧಿಗೆ ಸೀಮಿತಗೊಳಿಸಿ ಮಾಸಿಕ ರೂ.5000/- ದಂತೆ ಬಾಡಿಗೆ ಮೊತ್ತವನ್ನು (ಮುಂಗಡವಾಗಿ ರೂ.25,000/-ಗಳನ್ನು) ಅಥವಾ ಮನೆಗಳನ್ನು ಮನರ್ ನಿರ್ಮಿಸುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಪಾವತಿಸಲಾಗುವುದು. ಪ್ರಸ್ತುತ 5180 ಕುಟುಂಬಗಳಿಗೆ ರೂ. 2.59 ಕೋಟಿ ಬಿಡುಗಡೆ ಮಾಡಲಾಗಿದೆ.

7. ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ನಿಗದಿತ ಮಾನದಂಡಕ್ಕಿಂತ ಹೆಚ್ಚುವರಿಯಾಗಿ ರೂ.10,000/- ಇನ್‌ಪುಟ್ ಸಬ್ಸಿಡಿಯನ್ನು ಮಳೆಯಾಶ್ರಿತ, ನೀರಾವರಿ ಹಾಗೂ ಬಹುವಾರ್ಷಿಕ ಬೆಳೆ ಹಾನಿ (ಆಗಸ್ಟ್ ಮಾಹೆಯಲ್ಲಿ 9,70,352 ಹೆಕ್ಟೇರ್ ಹಾಗೂ ಸೆಪ್ಟೆಂಬರ್ & ಅಕ್ಟೋಬರ್ ಮಾಹೆಯಲ್ಲಿ 76,585 ಹೆಕ್ಟೇರ್ ಒಟ್ಟು 10,46,937 ಹೆಕ್ಟೇರ್ ಬೆಳೆ ಹಾನಿಯಾಗಿರುತ್ತದೆ) ಹೊಂದಿದ ಬಾಧಿತ ರೈತರಿಗೆ ನೀಡುವ ಮೂಲಕ ರೈತರ ಸಂಕಷ್ಟಗಳಿಗೆ ಸಕಾಲದಲ್ಲಿ ಸ್ಪಂದಿಸಿದೆ. ಸುಮಾರು 6,45,100 ರೈತರ ಬ್ಯಾಂಕ್ ಖಾತೆಗೆ ಇದುವರೆಗೆ ರೂ.1185.40 ಕೋಟಿ ಜಮಾ ಮಾಡಲಾಗಿದೆ.

